ಬೆಲೆ ರೂ.2.50
D.O.P - 15th of every month at Udupi Head Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ವರ್ಗಾಯಿಸಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ನವಂಬರ್ 2023

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844

ಸಂಪುಟ-24 ಸಂಚಿಕೆ-11 ಪುಟಗಳು-8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಉಡುಪಿಯಲ್ಲಿ ಸಂಭ್ರಮದ ನವರಾತ್ರಿ ಹಾಗೂ ವಿಜಯದಶಮಿಯ ಹಬ್ಬ





ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು ಇದರ ಆಶ್ರಯದಲ್ಲಿ ನವರಾತ್ರಿ ಹಬ್ಬವು ಅಶ್ವಯುಜ ಶುದ್ಧ ಪಾಡ್ಯ ತಾ.15.10.2023ರಿಂದ ಪ್ರಾರಂಭಗೊಂಡು ನವಮಿ ತಾ.23.10.2023ರವರೆಗೆ ವಿಜೃಂಭಣೆಯಿಂದ ನೆರವೇರಿತು. ವಿದ್ಯುತ್ ದೀಪಗಳಿಂದ ಶೃಂಗಾರಗೊಂಡ ಶ್ರೀ ಶಾರದಾ ಮಂಟಪ ಸಂಕೀರ್ಣ ಹಾಗೂ ಶ್ರೀ ಶಾರದಾ ದೇವಸ್ಥಾನವು ರಾತ್ರಿ ಹೊತ್ತಿನಲ್ಲಿ ಭಕ್ತರ ಕಣ್ಮನ ಸೆಳೆಯಿತು. ಪ್ರತೀದಿನ ಬಗೆಬಗೆಯ ಹೂವಿನಿಂದ ಅಲಂಕೃತಗೊಂಡ ದೇವಸ್ಥಾನದಲ್ಲಿ ಶ್ರೀ ಶಾರದಾ ದೇವಿಗೆ ಬಣ್ಣ ಬಣ್ಣದ ಸೀರೆಗಳು ಹಾಗೆಯೇ ವಿವಿಧ ಚಿನ್ನಾಭರಣಗಳಿಂದ, ಹೂಗಳಿಂದ ಅಲಂಕಾರಗೊಳಿಸಿ ಪೂಜಿಸಲಾಯಿತು. ಕುಂಕುಮಾರ್ಚನೆ, ಲಲಿತಾಸಹಸ್ರನಾಮ ಪಾರಾಯಣ, ಹೂವಿನ ಪೂಜೆ, ಅಲ್ಲದೆ ವಿವಿಧ ಸೇವೆಗಳನ್ನು ಭಕ್ತಿ, ಶ್ರದ್ಧೆಯಿಂದ ಅರ್ಪಿಸಲಾಯಿತು.

**ಪ್ರತಿದಿನ ದುರ್ಗಾನಮಸ್ಕಾರ ಪೂಜೆ**

ನವರಾತ್ರಿಯು ಪ್ರತೀದಿನ ಸಂಜೆ ಸಮಾಜಬಾಂಧವ ಭಕ್ತರಿಂದ ದುರ್ಗಾನಮಸ್ಕಾರ ಪೂಜೆ ನೆರವೇರಿಸಲು ಅವಕಾಶ ನೀಡಲಾಯಿತು. ಅಂತೆಯೇ ಪ್ರತೀದಿನ 5 ರಿಂದ 8 ಜನ ಸೇವಾಕಾಂಕ್ಷಿಗಳಿಂದ ದುರ್ಗಾನಮಸ್ಕಾರ ಸೇವೆ ಜರುಗಿತು. ಒಟ್ಟು ಒಂಭತ್ತು ದಿನದಲ್ಲಿ 50ಕ್ಕೂ ಅಧಿಕ ದುರ್ಗಾನಮಸ್ಕಾರ ಪೂಜೆಗಳು ಸಂಪನ್ನಗೊಂಡವು. ಪ್ರತೀದಿನ 5.00 ಗಂಟೆಗೆ ಶ್ರೀ ಶಾರದಾ ದೇವಸ್ಥಾನದಲ್ಲಿ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಳ್ಳುವ ಈ ಪೂಜಾ ಕಾರ್ಯಕ್ರಮದಲ್ಲಿ ಶ್ರೀ ಸತೀಶ್ ಭಟ್ ಪುರೋಹಿತರಾಗಿ ಕಾರ್ಯ ನಿರ್ವಹಿಸಿದ್ದು, ಸೇವಾದಾರರಿಗೆ ಮಂಗಳ ಪ್ರಸಾದ ನೀಡಿ ಗೌರವಿಸಿದರು.

ದುರ್ಗಾನಮಸ್ಕಾರ ಪೂಜೆಯ ವೇಳೆ ವಿವಿಧ ಸಂಘ ಸಂಸ್ಥೆಗಳಿಂದ ಭಜನಾ ಕಾರ್ಯಕ್ರಮ ನೆರವೇರಿತ್ತು. ಉಡುಪಿ ಶ್ರೀ ಶಾರದಾ ಭಜನಾ ಮಂಡಳಿ, ಪಡುಬಿದ್ರೆಯ ಮಹಿಳಾ ವೇದಿಕೆ, ಶಂಕರ ಪ್ರತಿಷ್ಠಾನ ಕಾರ್ಕಳ, ಜ್ಞಾನಶಕ್ತಿ ಬಳಗ ಬ್ರಹ್ಮಾವರ, ವಿಪ್ರ ಮಹಿಳಾ ಮಂಡಳಿ ಸೂರಾಲು, ಮಹಾಗಣಪತಿ ಭಜನಾ ಮಂಡಳಿ ತಂತ್ರಾಡಿ ಹಾಗೂ ಪರ್ಜನ್ಯ ರಾವ್ ಮೊದಲಾದ ತಂಡಗಳು ಭಾಗವಹಿಸಿದ್ದು ಇದರಲ್ಲಿ ಕೆಲವು ತಂಡಗಳು ಕುಣಿತದ ಭಜನೆ ಪ್ರದರ್ಶನ ಮಾಡಿದ್ದು ವಿಶೇಷವಾಗಿತ್ತು. ಒಂದು ದಿನ ಶ್ರೀ ಹಾವಂಜೆ ಮಂಜುನಾಥಯ್ಯ ಮತ್ತು ಶ್ರೀಮತಿ ಅಕ್ಷತಾ ವಿಶು ರಾವ್‌ರವರಿಂದ ವಾಚನ ಪ್ರವಚನ ಶ್ರೀದೇವಿ ಮಹಾತ್ಮೆ ಕಾರ್ಯಕ್ರಮವು ಆಯೋಜನೆಗೊಂಡಿತ್ತು. ಆಗಮಿಸಿದ್ದ ಎಲ್ಲಾ ಭಕ್ತರಿಗೂ ದುರ್ಗಾನಮಸ್ಕಾರ ಪೂಜಾ ಪ್ರಸಾದವಾಗಿ ಭೋಜನ ವ್ಯವಸ್ಥೆ ಮಾಡಲಾಗಿತ್ತು. ಅದರಂತೆ ಪ್ರತಿದಿನ ರಾತ್ರಿ 300ರಿಂದ 350 ಭಕ್ತರು ಭೋಜನಪ್ರಸಾದ ಸ್ವೀಕರಿಸಿದರು.

**ವಿಜಯ ದಶಮಿ ಆಚರಣೆ**

ದಿನಾಂಕ 24.10.2023ರ ವಿಜಯ ದಶಮಿಯಂದು ಬೆಳಿಗ್ಗೆ 7.00 ಗಂಟೆಗೆ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಒಂದಾಗಿ ದೇವಸ್ಥಾನದಲ್ಲಿ ದೇವರ ಪ್ರಾರ್ಥನೆಯಲ್ಲಿ ಪಾಲ್ಗೊಂಡರು. ವೇದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ ಮತ್ತು ತಂಡದ

(4ನೇ ಪುಟಕ್ಕೆ...)

## ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷರಾಗಿ ಕೆ.ಮಂಜುನಾಥ್ ಹೆಬ್ಬಾರ್

**ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಮುಂದಿನ 3 ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ನಮ್ಮ ಸಂಘದ ಅಧ್ಯಕ್ಷರಾದ ಕೆ. ಮಂಜುನಾಥ್ ಹೆಬ್ಬಾರ್ ಆಯ್ಕೆಯಾಗಿದ್ದಾರೆ. ಕಾರ್ಯಕಾರಿ ಸಮಿತಿಗೆ ಅಭಿನಂದನೆಗಳು.**


ಕೆ.ಮಂಜುನಾಥ್ ಹೆಬ್ಬಾರ್
ಅಧ್ಯಕ್ಷರು


ಮುರಳೀಧರ ಶರ್ಮ
ಪ್ರಧಾನ ಕಾರ್ಯದರ್ಶಿ


ಉದಯ ಬಾರ್ಕೂರು
ಕೋಶಾಧಿಕಾರಿ

### 2024–2027 ನೇ ಸಾಲಿನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು :

**ಅಧ್ಯಕ್ಷರು**–ಮಂಜುನಾಥ ಹೆಬ್ಬಾರ್, ಉಡುಪಿ; **ಪ್ರಧಾನ ಕಾರ್ಯದರ್ಶಿ**–ಕೆ. ಮುರಳೀಧರ ಶರ್ಮಾ, ನಿಟ್ಟೆ ; **ಉಪಾಧ್ಯಕ್ಷರು**–ಚಂದ್ರಶೇಖರ ರಾವ್, ಬೊಕ್ಕಸ, ಕೆ.ಪ್ರಭಾಕರ ರಾವ್, ಕಾಂತಾವರ ; **ಜೊತೆ ಕಾರ್ಯದರ್ಶಿ**–ಕೇಶವ ರಾವ್ ಕಾರ್ಕಳ, ಅಶೋಕ್ ಕುಮಾರ್ ಪುತ್ತೂರು; **ಕೋಶಾಧಿಕಾರಿ**–ಉದಯ, ಬಾರ್ಕೂರು ; **ಸಮಿತಿ ಸದಸ್ಯರು**–ಕೃಷ್ಣ ರಾವ್ ಮೈಸೂರು, ರಾಘವೇಂದ್ರ ರಾವ್ ಸುರತ್ಕಲ್, ಸಂತೋಷ್ ರಾವ್ ಬಂಟ್ವಾಳ ; ಗೌರವ ಸದಸ್ಯರು–ಸಿ.ಎಸ್. ರಾವ್ ಉಡುಪಿ, ಎನ್.ಕೆ. ಜಗನ್ನಿವಾಸ ರಾವ್ ಪುತ್ತೂರು, ಎಂ.ದೇವಾನಂದ ಭಟ್, ಬೆಳುವಾಯಿ.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಯುವ ವೇದಿಕೆ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ನಮ್ಮ ಸಂಘದ ಯುವ ವೇದಿಕೆಯ ಸಂಘಟನೆಯಲ್ಲಿ ನಮ್ಮ ಸಮಾಜ ಬಾಂಧವರಿಗೆ ದಿನಾಂಕ 24–12–2023ನೇ ರವಿವಾರದಂದು ಬೆಳಿಗ್ಗೆ 8–00ಕ್ಕೆ ಎಂ.ಜಿ.ಎಂ. ಕಾಲೇಜು, ಉಡುಪಿ ಇದರ ಕ್ರೀಡಾಂಗಣದಲ್ಲಿ

### ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ

ಏರ್ಪಡಿಸಲಾಗಿದೆ.7.30ರಿಂದ, ಉಪಹಾರ 9.00ಕ್ಕೆ ಉದ್ಘಾಟನೆ, 5.00ಕ್ಕೆ ಸಮಾರೋಪ ಸಮಾರಂಭ

ನಗದು ಬಹುಮಾನಗಳ ಪ್ರಾಯೋಜಕರು :

- ಪ್ರಥಮ ಬಹುಮಾನ : ರೂ.12,000/- ಶ್ರೀ ಅಲೆವೂರು ಶ್ಯಾಮರಾಯರು ತಮ್ಮ ಮಾತಾಪಿತರಾದ ದಿ| ಶಾಂತಾ ಹಾಗೂ ದಿ| ಭುಜಂಗರಾಯರ ಸ್ಮರಣಾರ್ಥ
- ದ್ವಿತೀಯ ಬಹುಮಾನ : ರೂ.8,000/- ಶ್ರೀಮತಿ ಸುನಂದ ಹಾಗೂ ಶ್ರೀ ಸಿ.ಎಸ್.ರಾವ್, ಚಿಟ್ಪಾಡಿ
- ಸಮಾಧಾನಕರ ಬಹುಮಾನ : ಒಟ್ಟು ರೂ.6,000/- ಶ್ರೀ ವೈ. ಭುವನೇಂದ್ರ ರಾಯರು ತಮ್ಮ ಮಾತಾಪಿತರಾದ ದಿ| ಗಿರಿಜಮ್ಮ ಹಾಗೂ ದಿ| ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕರ ಸ್ಮರಣಾರ್ಥ
- ಉತ್ತಮ ಬೌಲರ್, ಬ್ಯಾಟ್ಸ್‌ಮನ್ ಮತ್ತು ಆಲ್‌ರೌಂಡರ್ ಪುರಸ್ಕಾರ : ಒಟ್ಟು ರೂ.6,000/-, ಶ್ರೀ ಬಿ. ಜಯರಾಮ ರಾವ್

**ಮಹಿಳೆಯರ ತ್ರೋಬಾಲ್ ಪಂದ್ಯಾಟ**

- ಪ್ರಥಮ ಬಹುಮಾನ : ರೂ.5,000/-
- ದ್ವಿತೀಯ ಬಹುಮಾನ : ರೂ.3,000/-
- ಉತ್ತಮ ಆಟಗಾರ್ತಿ : ರೂ.1,000/-

} ಶ್ರೀಮತಿ ಸುಕನ್ಯಾ ಮತ್ತು ಶ್ರೀ ಸತೀಶ್ ರಾವ್, ಚಿಟ್ಪಾಡಿ

**ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ ಕ್ರಿಕೆಟ್‌ಪಂದ್ಯಾಟ ನಡೆಯಲಿದೆ.**

ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಸಹಕರಿಸುವವರು ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಮಹಿಳಾ ವೇದಿಕೆ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ತಾ.24-12-2023ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 8-00ರಿಂದ

ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀ ಶಾರದಾ ಮಂಟಪದಲ್ಲಿ **ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆ**ಗಳನ್ನು ಹಾಗೂ ಅಪರಾಹ್ನ 2ರಿಂದ ಎಮ್.ಜಿ.ಎಮ್. ಕ್ರೀಡಾಂಗಣದಲ್ಲಿ **ತ್ರೋಬಾಲ್ ಪಂದ್ಯಾಟ**ವನ್ನು ಏರ್ಪಡಿಸಲಾಗಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ


ಆಸಕ ತಂಡಗಳು ಸಂಘದ ಕಾರ್ಯದರ್ಶಿ ಪಿ. ಪ್ರಭಾಕರ ಭಂಡಿ (9449254846) ಅಥವಾ ಜೊತೆಕಾರ್ಯದರ್ಶಿ ವಿನೋದ್‌ಕುಮಾರ್ (8310966892), ಇವರಲ್ಲಿ ತಮ್ಮ ತಂಡದ ಹೆಸರನ್ನು ದಿನಾಂಕ 17-12-2023ರ ಒಳಗೆ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ. ಪಂದ್ಯಾಟದ ಫಿಕ್ಚರ್‌ನ್ನು 20.12.2023ರ ಸಾಯಂಕಾಲ ಹಾಕಲಾಗುವುದು.

– ಆಡಳಿತ ಮಂಡಳಿ

# ಮುದ್ದಣ ಸೇವಾನಿರತ ನಂದಳಿಕೆ ಬಾಲಚಂದ್ರ ರಾವ್

ವೈ.ಮೋಹನ ರಾವ್

ಏನನ್ನೂ ಬಯಸದೆ ಕೈಯಿಂದ ಖರ್ಚು ಮಾಡಿ ಮುದ್ದಣ್ಣ ನಾಮಾಂಕಿತ ದಿ. ನಂದಳಿಕೆ ಲಕ್ಷ್ಮೀನಾರ್ಣಪ್ಪನವರ ಸಾಹಿತ್ಯಕ್ಕೆ ಸಂದ ಕೊಡುಗೆ, ಪ್ರಸಂಗ ಸಾಹಿತ್ಯಕ್ಕೆ ಅವರಿತ್ತ ದೇಣಿಗೆ ಎಷ್ಟು ಜನರಿಗೆ ತಿಳಿದಿದೆ. ಮುದ್ದಣ್ಣನು ಹುಟ್ಟಿದ್ದು ಕುಗ್ರಾಮವಾದ ನಂದಳಿಕೆಯಲ್ಲಿ. ಆ ಕುಗ್ರಾಮದ ಸರ್ವತೋಮುಖವಾದ ಅಭಿವೃದ್ಧಿಗೆ ಪ್ರಯತ್ನ ಪಟ್ಟವರು, ಸಾಹಿತ್ಯ ಕೃತಿಗಳನ್ನು ಹೊಸ ವಿನ್ಯಾಸಗಳೊಂದಿಗೆ ಬೆಳಕಿಗೆ ತಂದವರು, ಯಕ್ಷಗಾನದ ಪದ್ಯಗಳನ್ನು ಹಿರಿಯ ಭಾಗವತರ ಸಹಕಾರದಿಂದ ಧ್ವನಿ ಮುದ್ರಣದಲ್ಲಿ ತಂದವರು ಎಷ್ಟು ಜನರಿದ್ದಾರೆ ಎಂಬುದು ಲೆಕ್ಕಕ್ಕೆ ಬಾರದ ವಿಷಯ. ನಾರ್ಣಪ್ಪನು ಹುಟ್ಟಿ ಬೆಳೆದ ಊರಿನಲ್ಲಿಯೇ ನಂದಳಿಕೆ ಬಾಲಚಂದ್ರ ರಾಯರು ಹುಟ್ಟಿ ಬೆಳೆದರು. ಮುದ್ದಣ್ಣ ಕಾವ್ಯನಾಮದ ನಾರ್ಣಪ್ಪನ ಪ್ರತಿಭೆಗಳಿಗೆ ಆ ಕಾಲದಲ್ಲಿ ನಿರೀಕ್ಷಿತ ಸ್ಥಾನಮಾನಗಳು ದೊರೆಯದಿದ್ದರೂ, ಮುದ್ದಣ್ಣ ಮನೋರಮೆಯನ್ನು ಮೆಚ್ಚಿಕೊಂಡು ಅವರ ಕೊಡುಗೆ ಮತ್ತು ನಂದಳಿಕೆ ಗ್ರಾಮದ ಅಭಿವೃದ್ಧಿಗಾಗಿ ಇಂದಿಗೂ ದುಡಿಯುತ್ತಿದ್ದಾರೆ. ಬಾಲಚಂದ್ರರಾಯರು ನಂದಳಿಕೆಯ ಒಂಟಿ ಸಲಗ ಎಂದು ಸಾಹಿತ್ಯ ಬಳಗದ ಅಧ್ಯಕ್ಷರಾದ ಎಚ್.ಬಿ.ಎಲ್. ರಾವ್ ಅವರು ಈ ಕೃತಿಯ ಮುನ್ನುಡಿಯಲ್ಲಿ ('ಎಷ್ಟು ಜನರಿಗೆ ತಿಳಿದಿದೆ') – ಹೇಳುತ್ತಾರೆ.






ಮುದ್ದಣ ವಿಶೇಷ ಅಂಚೆ ಚೀಟಿ ಲೋಕಾರ್ಪಣೆ

ಕವಿಯೊಬ್ಬನ ಹೆಸರಿನಿಂದ ಕವಿಯ ಹುಟ್ಟೂರಿನ ಅಭಿವೃದ್ಧಿ ಸಾಧ್ಯ. ಡಾಮರು ರಸ್ತೆ, ಆರೋಗ್ಯ ಕೇಂದ್ರ, ಗ್ರಂಥಾಲಯ, ಬಸ್ ವ್ಯವಸ್ಥೆ ಮುಂತಾದುವುಗಳು ಒದಗಿ ಬರುತ್ತದೆ ಎಂಬುದನ್ನು ಮಿತ್ರ ಮಂಡಳಿಯ ಸದಸ್ಯರ ಅರ್ಪಣಾ ಮನೋಭಾವದ ಸೇವೆಯ ಮೂಲಕ ಸಾಧಿಸಿ ತೋರಿಸಿದ್ದಾರೆ. ಮುದ್ದಣ ಸ್ಮಾರಕ ಮಿತ್ರ ಮಂಡಳಿಯ ಮೂಲಕ ಸ್ಥಳೀಯ ಯುವಕರ ಸಂಘಟನೆಯಾಯಿತು. ಕನ್ನಡದ ಮಹಾನ್ ಕವಿಗಳು, ಚಿಂತಕರು, ಬರಹಗಾರರು, ಜ್ಞಾನಪೀಠ ಪುರಸ್ಕೃತರು, ಕಲಾವಿದರು, ಯಕ್ಷಗಾನ ವಿದ್ವಾಂಸರು ನಂದಳಿಕೆಗೆ ಆಗಮಿಸುವಂತಾಯಿತು. ಗಂಜೀಫಾ ಪ್ರದರ್ಶನ, ಗ್ರಂಥಾಲಯ ಸ್ಥಾಪನೆಯಾಯಿತು. ಅಷ್ಟಾವಧಾನ, ತಾಳಮದ್ದಳೆ, ಕವಿಗೋಷ್ಠಿ, ಮುದ್ದಣ ಸಂಸ್ಮರಣೆ ಸಾಧಕರಿಗೆ ಸಮ್ಮಾನಗಳಾದವು. ಅಮೇರಿಕದ 'ಅಕ್ಕ' ಸಮ್ಮೇಳನದಲ್ಲಿ ಮುದ್ದಣನ ರಾಮಾಶ್ವಮೇಧ ಬಿಡುಗಡೆಯೂ ಆಯಿತು. ಚಟುವಟಿಕೆಗಳು ನಿರಂತರವಾಗುತ್ತಿರುವಂತೆ ನಾನು ಬ್ಯಾಂಕ್ ಉದ್ಯೋಗ ನಿಮಿತ್ತ ನಂದಳಿಕೆಯಿಂದ ದೂರವಾದೆ. ಆದರೆ ಬಾಂಧವ್ಯದ ಕೊಂಡಿ ಕಳಚಿಕೊಳ್ಳಲಿಲ್ಲ, ಸಂಪರ್ಕದಲ್ಲಿದ್ದೆ. ಕಾಲ ಉರುಳುತ್ತಲೇ ಇತ್ತು........ಇಷ್ಟಾಗುವಾಗ ನಾನು ವೃತ್ತಿಯಿಂದಲೂ ನಿವೃತ್ತನಾದೆ. ನಾನು ಸುಮಾರು ನಲ್ವತ್ತು ವರ್ಷ ಕಾಲ ಮುದ್ದಣನ ಕುರಿತಾಗಿ ಮಾಡಿದ ಕೆಲಸಗಳ ದಾಖಲೆ ಉಳಿಯಬೇಕು, ಅದು ಸಾರಸ್ವತ ಲೋಕಕ್ಕೆ ತಿಳಿಯಬೇಕು, ಸಜ್ಜನರನ್ನು ತಲುಪಬೇಕು. ಆಗ ನನ್ನ ಜೀವನ ಸಾರ್ಥಕ ಎಂದು ಕನಸು ಕಾಣುತ್ತಿದ್ದೆ. ಈ ಕನಸು ನನಸಾಗಬೇಕೆಂದು ಬಯಸಿದರೆ ತಪ್ಪಾಗದು ತಾನೆ? ಎಂದು ಕೃತಿಯಲ್ಲಿ 'ಮನದಾಳದ

(3ನೇ ಪುಟಕ್ಕೆ...)

ಸಂಪಾದಕ ಮಂಡಳಿ
ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★
ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಸುರತ್ಕಲ್
## 2022–23ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿ

ದಿನಾಂಕ 08–10–2023ನೇ ರವಿವಾರ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಸುರತ್ಕಲ್ ಇದರ ವಾರ್ಷಿಕ ಮಹಾಸಭೆಯು ಪೂರ್ವಾಹ್ನ ಗಂಟೆ 10:30ಕ್ಕೆ ಸರಿಯಾಗಿ ಸುರತ್ಕಲ್‌ನ ಇಡ್ಯಾ ವಿದ್ಯಾದಾಯಿನಿ ಪ್ರೌಢಶಾಲೆಯ "ವಜ್ರ ಮಹೋತ್ಸವ ಸಭಾಂಗಣ"ದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಉಪಾಧ್ಯಕ್ಷರಾದ ವಾಸುದೇವ ಶ್ಯಾನುಭೋಗ್‌ರವರು ವಹಿಸಿದ್ದರು. ವೇದಿಕೆಯಲ್ಲಿ ಗೌರವಾಧ್ಯಕ್ಷರಾದ ಭವಾನಿಶಂಕರ ರಾವ್, ಉಪಾಧ್ಯಕ್ಷರಾದ ಗೋಪಾಲಕೃಷ್ಣ ರಾವ್, ಕಾರ್ಯದರ್ಶಿ ಶ್ರೀ ಪಾಲಚಂದ್ರಶರ್ಮ ಎಂ., ಕೋಶಾಧಿಕಾರಿ ರಾಘವೇಂದ್ರ ರಾವ್ ಸಿ., ಪಡುಬಿದ್ರಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಎಂ.ಕೆ. ಮೋಹನ್ ರಾವ್, ಮಹಿಳಾವೇದಿಕೆಯ ಅಧ್ಯಕ್ಷೆ ಶ್ರೀಮತಿ ಪರಿಮಳಾ ಪ್ರಶಾಂತ್, ಯುವವೇದಿಕೆಯ ಅಧ್ಯಕ್ಷರಾದ ಕಾರ್ತಿಕ್ ಜೆ. ರಾವ್ ಉಪಸ್ಥಿತರಿದ್ದರು.

ಪ್ರಾರ್ಥನೆಯನ್ನು ಕು। ಸಂಜನಾ ರಾವ್ ನಡೆಸಿಕೊಟ್ಟರು. ವಾಸುದೇವ ಶ್ಯಾನುಭೋಗರು ಎಲ್ಲರನ್ನು ಸ್ವಾಗತಿಸಿದರು. ಬಳಿಕ 2022–23ನೇ ಸಾಲಿನಲ್ಲಿ ದೈವಾಧೀನರಾದ ಸಂಘದ ಸದಸ್ಯರ ಹೆಸರುಗಳನ್ನು ವಾಚಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಪಾಲಚಂದ್ರ ಶರ್ಮ ವಾರ್ಷಿಕ ಮಹಾಸಭೆಯ ನೋಟೀಸನ್ನು ಹಾಗೂ ವಾರ್ಷಿಕ ವರದಿಯನ್ನು ಓದಿ ಸಭೆಯಿಂದ ಅಂಗೀಕಾರ ಪಡೆದರು. ರಾಘವೇಂದ್ರ ರಾವ್ ವಾರ್ಷಿಕ ಲೆಕ್ಕಪತ್ರ, ಆಸ್ತಿ–ಜವಾಬ್ದಾರಿ ತಖ್ತೆ, ಖರ್ಚುವೆಚ್ಚದ ಪತ್ರ ಹಾಗೂ ಮುಂದಿನ ವರ್ಷದ ಅಂದಾಜು ಆಯ–ವ್ಯಯ ಪತ್ರವನ್ನು ಓದಿ ಸಭೆಯಿಂದ ಅಂಗೀಕಾರ ಪಡೆದುಕೊಂಡರು. ನಾಗರಾಜ ಶರ್ಮರನ್ನು ಮುಂದಿನ ವರ್ಷಕ್ಕೂ ಲೆಕ್ಕಪರಿಶೋಧಕರನ್ನಾಗಿ ಮರು ಆಯ್ಕೆ ಮಾಡಲಾಯಿತು. ನಂತರ ಪಡುಬಿದ್ರಿ ಸಂಘದ ಅಧ್ಯಕ್ಷರಾದ ಎಂ.ಕೆ. ಮೋಹನ್ ರಾಯರ ನೇತೃತ್ವದಲ್ಲಿ 2023–25ನೇ ಸಾಲಿಗೆ ಹೊಸ ಆಡಳಿತ

(6ನೇ ಪುಟಕ್ಕೆ...)


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು


Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408
ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.50%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10.5% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.
ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷದಿಂದ 5 ವರ್ಷದ ತನಕ | : 9% |
| 5 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% | | |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)
2016–17ರಿಂದ 2021–22ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.
ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala

## ಮುದ್ದಣ ಸೇವಾನಿರತ ನಂದಳಿಕೆ ಬಾಲಚಂದ್ರ ರಾವ್

■...1ನೇ ಪುಟದಿಂದ

ಮಾತುಗಳು' ಎಂಬಲ್ಲಿ ಮುದ್ದಣ ಸೇವಾನಿರತ ನಂದಳಿಕೆ ಬಾಲಚಂದ್ರ ರಾವ್ ನುಡಿದಿರುವರು.

ಶ್ರೀ ನಂದಳಿಕೆ ಬಾಲಚಂದ್ರ ರಾಯರು ಮುದ್ದಣ ಸೇವಾವ್ರತವನ್ನು ಪಾಲಿಸುತ್ತಿರುವ ಸಹೃದಯಿ. ಸಾಹಿತ್ಯ, ಸಂಘಟನೆ, ಸಮಾಜಸೇವೆಯನ್ನು ಮುದ್ದಣ ಕವಿಯ ಹೆಸರಿನೊಂದಿಗೆ ಬೆಸೆದು, 'ಕನ್ನಡಂ ಕತ್ತುರಿಯಲ್ತೆ' ಎಂಬ ಕಾವ್ಯಸ್ಫೂರ್ತಿಯಿಂದಲೇ ಅದನ್ನು ದಶಕಗಳ ಕಾಲ ನಡೆಸಿಕೊಂಡು ಬಂದ ಸರಳ ಸಜ್ಜನ ಬಂಧು. ಮೈಸೂರಿನಲ್ಲಿ ನಡೆದ ಯಕ್ಷಗಾನ ಪ್ರಶಸ್ತಿ ಪ್ರದಾನ ಸಮಾರಂಭವೊಂದರಲ್ಲಿ ಶ್ರೀ ಜಿ.ಎಸ್. ಭಟ್ ಅವರ ಮೂಲಕ ಪರಿಚಿತರಾಗಿ, ಆಮತೀಯತೆ ಬೆಳೆದು ಅವರ ಕುರಿತಾಗಿ ಪುಸ್ತಕವೊಂದನ್ನು ಬರೆಯುವವರೆಗೂ ನಮ್ಮ ಸ್ನೇಹ ವರ್ಧಿಸಿತು......ನಂದಳಿಕೆಯವರ ಕಾಯಕ ಓದುಗರಿಗೆ ಸ್ಫೂರ್ತಿ ನೀಡಲಿ ಎಂದು ಹಾರೈಸುತ್ತೇನೆ ಎಂಬುದು ಕೃತಿಯ 'ಲೇಖಕರ ಮಾತು' ಎಂಬಲ್ಲಿ ಡಾ. ಎನ್.ಕೆ. ರಾಮಶೇಷನ್ ಅವರು ಹೇಳುತ್ತಾರೆ.

ಈ ಕೃತಿಯನ್ನು ಓದಿದಾಗ ನಮ್ಮ ಒಳಗಣ್ಣು ಕಾಣುವ ಕೆಲವು ಮುಖ್ಯಾಂಶಗಳು ಹೀಗಿವೆ.

ನಂದಳಿಕೆ ಎಂಬ ಹಳ್ಳಿಯಲ್ಲಿ ಸುಬ್ಬರಾವ್ ಮತ್ತು ಗಿರಿಜಮ್ಮ ದಂಪತಿಗಳ ಆರು ಮಂದಿ ಮಕ್ಕಳಲ್ಲಿ ಐದನೆಯವರಾಗಿ ದಿನಾಂಕ 12 ಮಾರ್ಚ್ 1953 ರಲ್ಲಿ ಬಾಲಚಂದ್ರ ಜನಿಸಿದರು. ತಂದೆಯವರು ಊರಿನಲ್ಲಿ ಅಧ್ಯಾಪಕ ವೃತ್ತಿಯಲ್ಲಿದ್ದರು. ಸುಬ್ರಾಯ ಮಾಸ್ತರೆಂದೇ ಅವರು ಪ್ರಸಿದ್ಧರು. ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯಿಂದ ಸಂಮಾನಿತರು. ಜೊತೆಗೆ ಮಕ್ಕಳ ಸಾಹಿತ್ಯದಲ್ಲಿ ಕೃಷಿ ಮಾಡಿದವರು ಕೂಡ. ಬಾಲಕ ಬಾಲಚಂದ್ರ ತಂದೆಯವರ ಶಿಶು ಗೀತಗಳನ್ನು ಹಾಡುತ್ತಲೇ ಬೆಳೆದರು. ನಾಲ್ಕು ಮಂದಿ ಅಣ್ಣಂದಿರಾದ ಭಾಸ್ಕರರಾವ್, ಶಂಕರರಾವ್, ಕೃಷ್ಣ ರಾವ್, ದೇವರಾವ್ ಹಾಗೂ ಒಬ್ಬ ತಮ್ಮ ಸುಧಾಕರ ರಾವ್ ಜೊತೆಗೆ ಬಾಲ್ಯದ ದಿನಗಳನ್ನು ಕಳೆದರು. ಬಾಲಚಂದ್ರ ಪ್ರಾಥಮಿಕ ವಿದ್ಯಾಭ್ಯಾಸವನ್ನು ನಂದಳಿಕೆಯ ಮಹಾಲಿಂಗೇಶ್ವರ ಶಾಲೆಯಲ್ಲೇ ಮಾಡಿದರು. ಮುಂದಿನ ಪ್ರೌಢಶಾಲಾ ಕಲಿಕೆ ಮೂರು ಮೈಲು ದೂರದ ಬೆಳ್ಮಣ್ಣಿನಲ್ಲಿ........ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಪದವಿ ವ್ಯಾಸಂಗಕ್ಕೆ ಸೇರಿಕೊಂಡದ್ದಾಯಿತು. ಬಿಡುವಿನ ಸಮಯದಲ್ಲಿ 'ವಿಶ್ವಭವನ'ವೆಂಬ ಹೋಟೆಲಿನಲ್ಲಿ ದುಡಿಯುತ್ತಾ ವ್ಯಾಸಂಗ ಮುಂದುವರೆಯಿತು. ಅಣ್ಣ ಮತ್ತು ಸೋದರಮಾವ ಶಾಲಾಶುಲ್ಕ, ಪುಸ್ತಕಗಳ ವೆಚ್ಚ ಇತ್ಯಾದಿಗಳಿಗೆ ಸಹಾಯ ಮಾಡಿದರು. ಕಾಲೇಜಿನಲ್ಲಿ ಸ್ಮರಣ ಸಂಚಿಕೆಯಲ್ಲಿ ಆಗಲೇ 'ವರಕವಿ ಮುದ್ದಣ'ನೆಂಬ ಲೇಖನವನ್ನು ಬರೆದು ಮಹಾಕವಿಯನ್ನು ಮರೆಯಬಾರದೆಂಬ ಕಳಕಳಿಯನ್ನು ವ್ಯಕ್ತ ಪಡಿಸಿದ್ದು ಬೆಳೆಯುವ ಸಿರಿಯ ಮೊಳಕೆಗೆ ಸಾಕ್ಷಿ...........ಒಂದು ದಿನ ಕರ್ನಾಟಕ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎಸ್.ಎನ್. ಅಡಿಗ ಅವರನ್ನು ಕಂಡರು. ಸಾಂಸ್ಕೃತಿಕ ಹಿನ್ನೆಲೆಯೇ ಬ್ಯಾಂಕಿನ ಉದ್ಯೋಗಕ್ಕೆ ವರದಾನವಾಯಿತು. ತರುಣ ಬಾಲಚಂದ್ರನನ್ನು ನೋಡಿದ ಕೂಡಲೇ ಉದ್ಯೋಗಕ್ಕೆ ಸೇರಿಕೊಳ್ಳಲು ಸೂಚಿಸಿದರು. 1978 ರ ಮೇ 5 ರಂದು ಬಾಲಚಂದ್ರ ರಾವ್ ಅವರು ಕರ್ನಾಟಕ ಬ್ಯಾಂಕಿನ ಉದ್ಯೋಗಕ್ಕೆ ಸೇರ್ಪಡೆಗೊಂಡರು. ಸೋಮವಾರ ಪೇಟೆ ಹತ್ತಿರದ ಕೊಡ್ಲಿಪೇಟೆಯ ಬ್ಯಾಂಕ್ ಶಾಖೆಯಲ್ಲಿ ಅವರ ವೃತ್ತಿ ಜೀವನ ಆರಂಭವಾಯಿತು.

ಪುತ್ತೂರಿನ ಮಾರ್ಪಳ್ಳಿ ಶಿವರಾಮ ರಾವ್ ಮತ್ತು ಪದ್ಮಾವತಿ ದಂಪತಿಗಳ ಸುಪುತ್ರಿ ವಿಜಯಲಕ್ಷ್ಮಿ ಅವರೊಂದಿಗೆ 5 ಮೇ 1982ರಂದು ಬಾಲಚಂದ್ರ ರಾವ್ ಅವರು ಗೃಹಸ್ಥ ಜೀವನಕ್ಕೆ ಕಾಲಿಟ್ಟರು. ವಿನಯಶೀಲೆಯೂ ಪದವೀಧರೆಯೂ ಆಗಿದ್ದ ವಿಜಯಲಕ್ಷ್ಮಿ ಅವರು ಮಂಗಳೂರು ವಿಶ್ವವಿದ್ಯಾಲಯದ ಕಾಲೇಜು ಗ್ರಂಥಾಲಯದಲ್ಲಿ ಗುಮಾಸ್ತೆ ಬೆರಳಚ್ಚುಗಾರ್ತಿಯಾಗಿ ಉದ್ಯೋಗದಲ್ಲಿದ್ದು ಇತ್ತೀಚೆಗೆ ನಿವೃತ್ತರಾಗಿದ್ದಾರೆ. ಇವರ ದಾಂಪತ್ಯದ ಫಲವೇ ಏಕೈಕ ಮಗಳು ಸೌಜನ್ಯಾ. ಈಕೆಯೂ ಇಂಜಿನಿಯರಿಂಗ್ ಪದವೀಧರೆ. ಜೊತೆಗೆ ಭರತನಾಟ್ಯ ಮತ್ತು ಯಕ್ಷಗಾನದಲ್ಲಿ ಕಲಾವಿದೆಯೂ ಆಗಿದ್ದಾಳೆ. ಹರಿಕಥಾವಿದುಷಿಯಾಗಿದ್ದ ತಾಯಿಯ ತಾಯಿ ಪದ್ಮಾವತಿ ರಾವ್ ಅವರ ಮಾರ್ಗದರ್ಶನ ಪಡೆದು ಭರತನಾಟ್ಯದಲ್ಲಿ ವಿದ್ವತ್ ಪದವಿಯನ್ನೂ ಪೂರೈಸಿರುವ ಸೌಜನ್ಯಾ ಈಗ ವಿದೇಶಿ ಮೂಲದ ಕಂಪೆನಿಯೊಂದರಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈಗ ಇವರು ವಿವಾಹಿತೆಯಾಗಿದ್ದಾರೆ. ನಂದಳಿಕೆಯ ಹಸಿರಿನ ಪರಿಸರದಲ್ಲೇ 'ಐಸಿರಿ' ಎಂಬ ಮನೆಯೊಂದನ್ನು ಕಟ್ಟಿಕೊಂಡು ಈ ಮುದ್ದಣ▯ಮನೋರಮೆಯರ ನಿವೃತ್ತ ಜೀವನ ಸಾಗಿದೆ.

ಮುಂದೆ ಮಂಗಳೂರು ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್. ವಿದ್ಯಾರ್ಥಿಗಳ ಪರಿಶ್ರಮದಿಂದ ಮುದ್ದಣ ಸ್ಮಾರಕ ಭವನ ರೂಪುಗೊಂಡಿತು.........ಐತಿಹಾಸಿಕ ಸ್ಪರ್ಧೆಯಲ್ಲಿ 'ನಂದಳಿಕೆಯ ಕವಿಮುದ್ದಣ ಸ್ಮಾರಕ ಮಿತ್ರ ಮಂಡಳಿ' ತನ್ನ ಅತ್ಯುತ್ತಮ ಸಾಧನೆಗಾಗಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. (1992) ಸಂಸ್ಥೆಯ ಗೌರವಾಧ್ಯಕ್ಷ ನಂದಳಿಕೆ ಬಾಲಚಂದ್ರ ರಾವ್ ಅವರು 'ಉದಯವಾಣಿ ವಿಂಶತಿ' ಪ್ರಶಸ್ತಿಯನ್ನು ಸ್ವೀಕರಿಸಿದರು. ನಂದಳಿಕೆಯ ಮಿತ್ರಮಂಡಳಿ ನಾಡಿನಲ್ಲೆಲ್ಲಾ ಮನೆಮಾತಾಯಿತು.

ನಂದಳಿಕೆ ಬಾಲಚಂದ್ರ ರಾವ್ ಅವರ ಕನ್ನಡ ವಾಙ್ಮಯಸೇವೆಯೂ ಗಮನಾರ್ಹವಾದುದು. 'ನಿಷ್ಠುರ ವಿದ್ವಾಂಸ ತೆಕ್ಕುಂಜ ಗೋಪಾಲಕೃಷ್ಣ ಭಟ್ಟ', 'ದಕ್ಷಿಣ ಕನ್ನಡದ ನವೋದಯದ ಕಣ್ವ ಬೆನಗಲ್ ರಾಮರಾವ್', ವಿಜಯಲಕ್ಷ್ಮಿ ಪ್ರಕಾಶನದ ಮೂಲಕ ಡಾ. ಎನ್.ವಿ. ರಾವ್ ಮತ್ತು ನಂದಳಿಕೆ ಬಾಲಚಂದ್ರ ರಾವ್ ಸಂಪಾದಕತ್ವದಲ್ಲಿ 'ನಂದಳಿಕೆ ಶ್ರೀ ಮಹಾಲಿಂಗೇಶ್ವರ' ಅವರ ಮುಖ್ಯ ಕೃತಿಗಳು. ಇವುಗಳಲ್ಲದೆ ನಂದಳಿಕೆಯ ನಂದಾದೀಪ, ನಂದಳಿಕೆಯ ನಂದನ, ಜಯರಾಮ ಕಾರಂತರ ಪ್ರಧಾನ ಸಂಪಾದಕತ್ವದಲ್ಲಿ ಮುದ್ದಣ್ಣನಿಗೆ ನಮನ, ಗುರು ನಮನ ಇತ್ಯಾದಿ ಕೃತಿಗಳನ್ನು ಅವರು ಸಂಪಾದಿಸಿದ್ದಾರೆ. ತುಳು ಭಾಷೆಯಲ್ಲಿ ಮುದ್ದಣನ ಕುರಿತು ಬರೆದ 'ತುಳುನಾಡ್‌ದ ಮಾಮಲ್ಲ ಕವಿ ನಂದೊಳಿಗೆ ಮುದ್ದಣೆ' ಎಂಬ ಕೃತಿಯನ್ನು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ.

ನಂದಳಿಕೆಯವರ ಸಾಹಸಗಾಥೆಯಲ್ಲಿ ಪುಸ್ತಕ ಪ್ರಕಾಶನವೂ ಸೇರಿದೆ. ಇದಕ್ಕಾಗಿಯೇ 'ಮುದ್ದಣ ಪ್ರಕಾಶನ'ವನ್ನು ಸ್ಥಾಪಿಸಿ ಆ ಮೂಲಕ ಅವರು ಪುಸ್ತಕ ಶಾರದೆಯ ಸೇವೆ ಮಾಡಿದ್ದಾರೆ. ಈ ಪ್ರಕಾಶನದ ಮೂಲಕ ಅವರು ಪ್ರಕಟಿಸಿದ ಮುದ್ದಣ ಕವಿ ವಿರಚಿತ 'ಶ್ರೀರಾಮಾಶ್ವಮೇಧಂ' ಬಹು ಅಮೂಲ್ಯವಾದ ಗ್ರಂಥ. ಈ ಹೊತ್ತಗೆಗೆ 'ಅಮೇರಿಕಾದ ಬಾಲ್ಟಿಮೋರ್' ನಲ್ಲಿ ಜರಗಿದ (2006) 'ಅಕ್ಕ' ವಿಶ್ವಕನ್ನಡ ಸಮ್ಮೇಳನದಲ್ಲಿ ಕವಿವರೇಣ್ಯ ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರಿಂದ ಅನಾವರಣಗೊಂಡುದು ಬಾಲಚಂದ್ರ ರಾಯರ ಪರಿಶ್ರಮಕ್ಕೆ ಸಂದ ಗೌರವವೇ ಸರಿ.

ಮುದ್ದಣನ ಯಕ್ಷಗಾನ 'ರತ್ನಾವತೀ ಕಲ್ಯಾಣ' ಪ್ರಸಂಗದ ಪದ್ಯಗಳಿಗೆ ಖ್ಯಾತ ಅರ್ಥಧಾರಿ ಹರಿದಾಸ. ಮಲ್ಪೆ ರಾಮದಾಸ ಸಾಮಗರಿಂದ ಅರ್ಥವನ್ನು ಬರೆಸಿ ಬಹು ಹಿಂದೆಯೇ ಪ್ರಕಟಿಸಿದ್ದಾರೆ. 'ಕುಮಾರವಿಜಯ' ಯಕ್ಷಗಾನ ಪ್ರಸಂಗದ ಪದ್ಯಗಳಿಗೆ ಪ್ರಸಿದ್ಧ ಅರ್ಥಧಾರಿ ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ ಅವರಿಂದ ಅರ್ಥವನ್ನು ಬರೆಸಿ ಕೃತಿಯೊಂದನ್ನು (2004) ಪ್ರಕಟಿಸಿದ್ದಾರೆ. ಪ್ರಸಿದ್ಧ ಕಲಾವಿದರಿಂದ ಮುದ್ದಣನ ಎರಡು ಯಕ್ಷಗಾನ ಕೃತಿಗಳ ತಾಳಮದ್ದಳೆ, ಗಾಯನದ ಧ್ವನಿ ಸುರುಳಿ ಹಾಗೂ ಪ್ರದರ್ಶನದ ಅಡಕತಟ್ಟೆಗಳನ್ನೂ ಬಾಲಚಂದ್ರ ರಾವ್ ನಿರ್ಮಿಸಿದ್ದಾರೆ.

ನಂದಳಿಕೆ ಬಾಲಚಂದ್ರರಾವ್ ಅವರ ನಿಸ್ಪ್ರಹ ಸಮಾಜಸೇವೆಗೆ ಒಲಿದು ಒಲಿದು ಬಂದ ಮನ್ನಣೆ ಎಂದರೆ ದೂರಸಂಪರ್ಕ ಇಲಾಖೆಯ ಸಲಹಾ ಸಮಿತಿಯ ಸದಸ್ಯತ್ವದ ಗೌರವ. ಆ ಕಾಲಕ್ಕೆ ಟೆಲಿಕಾಮ್ ಸಂಸ್ಥೆಯ ಜನರಲ್ ಮೆನೇಜರ್ ಆಗಿ ಕಜಂಪಾಡಿ ರಾಮ ಎಂಬವರು ಕಾರ್ಯನಿರ್ವಹಿಸುತ್ತಿದ್ದರು. ಅವರು ದಕ್ಷತೆಗೆ ಇನ್ನೊಂದು ಹೆಸರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟೆಲಿಫೋನ್ ಕ್ರಾಂತಿಯನ್ನು ಮಾಡಿದ ಮಹಾನುಭಾವ. ಇವರೀರ್ವರ ಜೋಡಿ ದೂರಸಂಪರ್ಕದ ಮೂಲಕ ದಕ್ಷಿಣ ಕನ್ನಡಜಿಲ್ಲೆಯ ಗ್ರಾಮೀಣ ಚಿತ್ರವನ್ನೇ ಬದಲಾಯಿಸಿತು ಎಂದರೆ ತಪ್ಪಾಗದು.

ನಂದಳಿಕೆಯವರ ಹವ್ಯಾಸಗಳಲ್ಲಿ ಮುಖ್ಯವಾದುದು ಫೋಟೋಗ್ರಫಿ, ಮಂಗಳೂರಿನಲ್ಲಿ ಪ್ರಸಿದ್ಧ ಛಾಯಚಿತ್ರಗ್ರಾಹಕರಾದ ಶ್ರೀ ಯಜ್ಞ ಅವರಲ್ಲಿ ಸಲಹೆ ಸೂಚನೆ ಪಡೆದರು. ಅವರ ಮಾರ್ಗದರ್ಶನದಲ್ಲಿ ನಂದಳಿಕೆ ಬಾಲಚಂದ್ರ ರಾಯರು ಪಳಗಿದರು.

ನಂದಳಿಕೆ ಬಾಲಚಂದ್ರ ರಾವ್ ಅವರ ಮುದ್ದಣನ 'ಅಂಚೆ ಚೀಟಿ'ಯ ಬಗೆಗಿನ ಹೋರಾಟದ ಗಾಥೆಯನ್ನು ಹೇಳಬಹುದು. ಅದಕ್ಕಾಗಿ ಭಾರತ ದೇಶದ ಅಂಚೆ ಇಲಾಖೆಯನ್ನು ಸಂಪರ್ಕಿಸಿದ ಅವರು ಮುದ್ದಣನ ಅಂಚೆ ಚೀಟಿ ಬಿಡುಗಡೆಗಾಗಿ ಪ್ರಯತ್ನಿಸಿದರು. ಪತ್ರ ವ್ಯವಹಾರ, ನಿರಂತರ ಅಧಿಕಾರಿಗಳೊಂದಿಗೆ ಸಂಪರ್ಕ ಐದಾರು ಬಾರಿ ದೆಹಲಿಗೆ ಭೇಟಿ ಮುಂತಾಗಿ ಅವರು ಪಟ್ಟ ಪರಿಶ್ರಮಕ್ಕೆ ಮುದ್ದಣ ಒಂದೇ ಸ್ಫೂರ್ತಿ, ಸಮಾಧಾನ, ಸಂತೃಪ್ತಿ ಎಲ್ಲವೂ ಆಗಿತ್ತು. 2017 ನವೆಂಬರ್ ಒಂದರಂದು ಮುದ್ದಣನ ಹೆಸರಿನ ಅಂಚೆ ಚೀಟಿಯನ್ನು ಭಾರತದ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರಮೋದಿಯವರು ದೆಹಲಿಯಲ್ಲಿ ಬಿಡುಗಡೆ ಮಾಡಿದರು.

ಶ್ರೀನಿವಾಸಮೂರ್ತಿ, ರಾಜೀವ ಶೆಟ್ಟಿ ಕೆ., ಕೋಟ ಶಿವರಾಮ ಕಾರಂತ, ರಾಮಕೃಷ್ಣ ಹೆಗ್ಡೆ, ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಹಾ.ಮಾ. ನಾಯಕ, ಕು. ಶಿ. ಹರಿದಾಸ ಭಟ್ಟ, ಎಚ್ಚೆಸ್ಕೆ, ಜಿ. ವೆಂಕಟಸುಬ್ಬಯ್ಯ, ಎಲ್.ಎಸ್. ಶೇಷಗಿರಿ ರಾವ್, ಬನ್ನಂಜೆ ಗೋವಿಂದಾಚಾರ್ಯ, ಚೆನ್ನವೀರ ಕಣವಿ, ಅಮೃತ ಸೋಮೇಶ್ವರ, ಡಾ. ಎಂ. ಪ್ರಭಾಕರ ಜೋಷಿ, ಕೆ.ಎಲ್. ಕುಂಡಂತಾಯ ಮೊದಲಾದ ಹಿರಿಯರ ಹರಕೆಯ ನುಡಿಗಳು ಈ ಕೃತಿಯಲ್ಲಿವೆ. ಉದಯವಾಣಿ, ಪ್ರಜಾವಾಣಿ, ತರಂಗ, ಸುಧಾ, ಪ್ರಪಂಚ, ಕರವೇ ನಲ್ನುಡಿ ಮೊದಲಾದ ಪತ್ರಿಕೆಗಳಿಂದ ಪ್ರಶಂಸೆಗಳು ಈ ಕೃತಿಯಲ್ಲಿವೆ. ಕರ್ಮವೀರ ಪತ್ರಿಕೆಯಲ್ಲಿ ನಂದಳಿಕೆ ಬಾಲಚಂದ್ರ ರಾವ್ ಅವರ ಅಂತರಂಗವನ್ನು 24 ಜನವರಿ 2004ರ ಸಂಚಿಕೆ ದಾಖಲಿಸುತ್ತದೆ. ಈ ಸಂದರ್ಶನವನ್ನು ಮಾಡಿದವರು ಖ್ಯಾತಲೇಖಕರಾದ ಜಿ.ಕೆ. ಐತಾಳ ಅವರು.

ನಂದಳಿಕೆ ಬಾಲಚಂದ್ರ ರಾವ್ ಒಮ್ಮೆ ವಿಸ್ಮಯದ ಚೈತನ್ಯವಾಗಿ, ಇನ್ನೊಮ್ಮೆ ಸ್ನೇಹಶೀಲ ಗೆಳೆಯನಾಗಿ, ಮತ್ತೊಮ್ಮೆ ನೂರಾರು ಕನಸುಗಳನ್ನು ಹೊತ್ತ ರಸಋಷಿಯಾಗಿ ಕಾಣಿಸುತ್ತಾರೆ. ಅವರೊಳಗೆ ನಂದಳಿಕೆಯ ಪುಣ್ಯನೆಲದ ಅಂತಃಸತ್ವವೇ ಆವಾಹನೆಗೊಂಡಂತೆ ಭಾಸವಾಗುತ್ತದೆ. ಈ ಲೋಕದಲ್ಲಿ ತನಗೆ ಬೇಕಾದುದನ್ನು ಮಾಡಿಸಿಕೊಳ್ಳಲು ಕಾಲವೇ ಕೆಲವರನ್ನು ಆಯ್ಕೆ ಮಾಡಿಕೊಳ್ಳುತ್ತದೆ. "ಕಾಲಪುರುಷನ ಗುಣಂ ಅಚಿಂತ್ಯಂ ಗಡ!" ಮುದ್ದಣ ಸೇವಾನಿರತರಾದ ನಂದಳಿಕೆ ಬಾಲಚಂದ್ರ ರಾಯರು ಅಂತಹ ಭಾಗ್ಯವಂತರು!

ಬಾಲಚಂದ್ರ ರಾವ್ ಎಲ್ಲರೂ ಬೇಕೆನ್ನುವ ವಿಶ್ವಕುಟುಂಬಿ. ಸಮಾಜಸೇವೆ ಮತ್ತು ಸಾರ್ವಜನಿಕ ಸಂಬಂಧದಲ್ಲಿ ವಿಶೇಷ ಮುತುವರ್ಜಿವಹಿಸಿದ ಅವರು 'ನಂದಳಿಕೆ' ಎಂಬ ಹೆಸರಿನಿಂದಲೇ ಪ್ರಸಿದ್ಧರಾದ ಮುದ್ದಣ ಸೇವಾನಿರತ ನಂದಳಿಕೆ ಬಾಲಚಂದ್ರ ರಾವ್ ಅವರಿಗೆ ಅಭಿನಂದನೆಗಳು.

Buying and selling shares
as easy as checking your emails

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

ಪ್ರೊ : ನಯನಾಭಿರಾಮ ಸ್ವಾಮಿ
ಮೊಬೈಲ್ : 9449101303, 9632500864

ಉದಯಾದ್ರಿ ಕೆಟರರ್ಸ್

ಉಮಾಮಹೇಶ್ವರ ಉದಯಾದ್ರಿ ಮಠ,
ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಹತ್ತಿರ,
"ಅಂಗೀರಸ", ಪಡುಬಿದ್ರಿ, ಉಡುಪಿ ಜಿಲ್ಲೆ.

ಮದುವೆ ಇನ್ನಿತರ ಸಮಾರಂಭಗಳಿಗೆ
ಶುಚಿರುಚಿಯಾದ ಅಡುಗೆ
ಮಾಡಿಕೊಡಲಾಗುವುದು.
ಶ್ರಾದ್ಧ ಮತ್ತು ಔರ್ಧ್ವದೈಹಿಕ ಕ್ರಿಯೆಗಳನ್ನು
ಅಲ್ಲದೇ ಇತರ ವೈದಿಕ ಕಾರ್ಯಕ್ರಮಗಳನ್ನು
ಕೂಡಾ ನಡೆಸಿಕೊಡಲಾಗುವುದು.
ಸಮಾಜಬಾಂಧವರು ಸದುಪಯೋಗ
ಪಡಿಸಿಕೊಳ್ಳಬಹುದು.

## ಉಡುಪಿಯಲ್ಲಿ ಸಂಭ್ರಮದ ನವರಾತ್ರಿ ಹಾಗೂ ವಿಜಯದಶಮಿಯ ಹಬ್ಬ

■...1ನೇ ಪುಟದಿಂದ

ಪೌರೋಹಿತ್ಯದಲ್ಲಿ ವಿವಿಧ ಪೂಜಾ ವಿಧಿಗಳು ಪ್ರಾರಂಭಗೊಂಡವು. ನಂತರ ಚಂಡಿಕಾ ಯಾಗವು ಪ್ರಾರಂಭಗೊಂಡಿತು. ಮಧ್ಯಾಹ್ನ 12.00 ಗಂಟೆಗೆ ಮಂಗಳಾರತಿ ಮತ್ತು ಯಾಗದ ಪೂರ್ಣಾಹುತಿಯು ನೆರವೇರಿತು. ಚಂಡಿಕಾಯಾಗದ ಕರ್ತೃಗಳಾಗಿ ಭಾರತ ಸರ್ಕಾರದ ಆಹಾರ ನಿಗಮದ ನಿವೃತ್ತ ಅಧಿಕಾರಿಗಳಾದ ಸರ್ವಜ್ಞ ರಾವ್ ಚಿಟ್ಪಾಡಿ ಹಾಗೂ ಶ್ರೀಮತಿ ಚಂದ್ರಕಲಾ ದಂಪತಿಗಳು ಪಾಲ್ಗೊಂಡರು.

**ಅನ್ನ ಸಂತರ್ಪಣೆ :**

ಚಂಡಿಕಾಯಾಗದ ಪ್ರಸಾದ ರೂಪದಲ್ಲಿ ಮಧ್ಯಾಹ್ನ ಅನ್ನಸಂತರ್ಪಣೆ ನೆರವೇರಿತು. ಸುಮಾರು 1100 ಭಕ್ತರು ಪ್ರಸಾದ ಭೋಜನ ಸ್ವೀಕರಿಸಿದರು. ವಿಶೇಷವಾಗಿ ಭೋಜನಕ್ಕೆ ಬೇಕಾದ ಅಕ್ಕಿ, ಬೇಳೆ, ತುಪ್ಪ, ಎಣ್ಣೆ, ಸಕ್ಕರೆ, ದಿನಸು ಪದಾರ್ಥಗಳು, ತರಕಾರಿ, ಹಣ್ಣು ಹಂಪಲು, ಬೆಲ್ಲ, ಮೆಣಸು, ಬಾಳೆಎಲೆ, ಇವುಗಳಲ್ಲದೆ ಬೇರೆ ಬೇರೆ ರೀತಿಯ ಭಕ್ಷ್ಯಗಳು (ಜಿಲೇಬಿ, ವಡೆ, ಹಾಲು ಪಾಯಸ..........) ಮೊದಲಾದವುಗಳು ಭಕ್ತರ ದೇಣಿಗೆಯಿಂದಲೇ ವ್ಯವಸ್ಥೆಗೊಳಿಸಲಾಗಿತ್ತು.

**ಸಮಾಜ ಬಾಂಧವರಿಗೆ ಸ್ಪರ್ಧೆಗಳು :**

ಬೆಳಿಗ್ಗೆ 9.00 ಗಂಟೆಯಿಂದ ಸಮಾಜಬಾಂಧವರಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಭಕ್ತಿ ಸಂಗೀತ, ರಂಗೋಲಿ, ಚಿತ್ರ ಬಿಡಿಸುವುದು, ಕಂಠಪಾಠ, ಶಂಖ ಊದುವುದು, ಚೂರ್ಣಿಕೆ ಹೇಳುವುದು ಮತ್ತು ಕಂಠಪಾಠ ಮೊದಲಾದ ಸ್ಪರ್ಧೆಗಳನ್ನು ವಿವಿಧ ವಿಭಾಗಗಳಲ್ಲಿ ಸಮಾಜದ ವಿದ್ಯಾರ್ಥಿಗಳು, ಹಿರಿಯರು ಭಾಗವಹಿಸಿ ಸಂಘಟಕರ ಪ್ರಯತ್ನಕ್ಕೆ ಸಾಫಲ್ಯ ನೀಡಿದರು.

**ಸ್ಪರ್ಧೆಗಳು– ಬಹುಮಾನಿತರು :**

**ಭಕ್ತಿಗೀತೆ :** (4ನೇ ತರಗತಿಯವರೆಗೆ) : 1.ರಿತ್ವಿಕ್ ರಾವ್ 2. ವಿಹಾರ್ 3. ಧೀಮಹಿ

(5–8ನೇ ತರಗತಿಯವರೆಗೆ): 1. ವಿಭಾ ರಾವ್ ಬಿ. 2. ಅದಿತಿ ಹೆಬ್ಬಾರ್ 3. ದ್ಯುತಿ ಹೆಬ್ಬಾರ್

(9 ರಿಂದ ಪದವಿ ಪೂರ್ವದವರೆಗೆ) ಸಮಾಧಾನಕರ ಬಹುಮಾನ – ನಿಹಾರಿಕಾ

**ಚಿತ್ರ ರಚನೆ** (4ನೇ ತರಗತಿಯವರೆಗೆ) : 1. ಸಾನಿಧ್ಯ ಹೆಬ್ಬಾರ್ 2. ಆಯುಷ್ ಎಮ್. ರಾವ್ 3. ಶ್ರೀಹಾನ್ ರಾವ್, ಅಹನಾ ರಾವ್

(5–8ನೇ ತರಗತಿಯವರೆಗೆ) : 1. ಆದ್ಯ ಹೆಬ್ಬಾರ್ 2. ವಿಭಾ ರಾವ್ ಬಿ. 3. ಇಂಚರಾ ರಾವ್

**ರಂಗವಲ್ಲಿ :** (4ನೇ ತರಗತಿಯವರೆಗೆ) ಸಮಾಧಾನಕರ ಬಹುಮಾನ – ಆಯುಷ್ ಎಮ್. ರಾವ್, ಅಹನಾ ಎ. ರಾವ್

(5–8ನೇ ತರಗತಿಯವರೆಗೆ) ಸಮಾಧಾನಕರ ಬಹುಮಾನ – ಅದಿತಿ ಹೆಬ್ಬಾರ್, ಅನುಶ್ರೀ ರಾವ್

(9 ರಿಂದ ಪದವಿ ಪೂರ್ವದವರೆಗೆ) : 1. ರಕ್ಷಿತಾ ರಾವ್ 2. ದೀಕ್ಷಾ ರಾವ್ 3. ಅದಿತಿ ಗಣೇಶ ರಾವ್

**ಕಂಠಪಾಠ**

(5–8ನೇ ತರಗತಿಯವರೆಗೆ) : ಸಮಾಧಾನಕರ ಬಹುಮಾನ – ದ್ಯುತಿ ಹೆಬ್ಬಾರ್, ಇಂಚರ ರಾವ್

**ಶಂಖ ಊದುವುದು :** (4ನೇ ತರಗತಿಯ ವರೆಗೆ) 1. ವೀಣಾ ಗಣೇಶ್ ರಾವ್ 2. ಸದಾಶಿವ ಶಾಸ್ತ್ರಿ 3. ಕಾರ್ತಿಕ್ ರಾವ್

**ಚೂರ್ಣಿಕೆ :** (4ನೇ ತರಗತಿಯವರೆಗೆ) 1. ಮಲ್ಲಿಕಾರ್ಜುನ ರಾವ್ 2. ಪರ್ಜನ್ಯ ರಾವ್ 3. ಶ್ವೇತಾ ಎಸ್. ಆರ್.

ಈ ಎಲ್ಲಾ ಸ್ಪರ್ಧೆಗಳಲ್ಲಿ ಶ್ರೀಮತಿ ದಿವ್ಯಶ್ರೀ ಉಡುಪಿ, ಶ್ರೀಮತಿ ವಿದ್ಯಾ ಎಸ್. ರಾವ್ ಕುಕ್ಕಿಕಟ್ಟೆ, ಡಾ| ಕೆ. ರವೀಂದ್ರನಾಥ ರಾವ್, ಪ್ರವೀಣ್ ಕುಮಾರ್ ರಾವ್ ಕುಕ್ಕಿಕಟ್ಟೆ, ಶ್ರೀಮತಿ ಪ್ರೀತಿ ಎಸ್. ರಾವ್, ಶ್ರೀಮತಿ ವೃಂದಾ ಕೆ. ರಾವ್ ಮಟ್ಟು, ಶ್ರುತಿ ರಾವ್ ಹಿರಿಯಡ್ಕ, ವೈಷ್ಣವಿ ಕುಕ್ಕಿಕಟ್ಟೆ, ಶ್ರೀನಿಧಿ ಅಲೆವೂರು, ಮೊದಲಾದವರು ತೀರ್ಪುಗಾರರಾಗಿ ಸಹಕರಿಸಿದರು. ಅರವಿಂದ್ ಕುಮಾರ್, ಜಗದೀಶ್ ರಾವ್ ರವರು ಎಲ್ಲಾ ಸ್ಪರ್ಧೆಗಳನ್ನು ನಡೆಸಿಕೊಟ್ಟರು.

**ವಿದ್ಯಾರ್ಥಿವೇತನ ವಿತರಣೆ**

ಪ್ರತಿವರ್ಷದಂತೆ ಸಂಘದ ವಿದ್ಯಾರ್ಥಿ ವೇತನ ನಿಧಿಯ ಮೂಲಕ ವಿತರಿಸಲಾಗುವ ಈ ವರ್ಷದ ವಿದ್ಯಾರ್ಥಿವೇತನವನ್ನು ಸಭಾ ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ ವಿದ್ಯಾರ್ಥಿಗಳಿಗೆ ವಿತರಿಸಲಾಯಿತು. ಉಳಿದಂತೆ ಇತರ ವಿದ್ಯಾರ್ಥಿಗಳಿಗೆ ಬ್ಯಾಂಕ್ ಮೂಲಕ ಅವರ ಖಾತೆಗಳಿಗೆ ಜಮಾ ಮಾಡಲಾಗಿದೆ. ಈ ವರ್ಷ ಬಂದ ಅರ್ಜಿಗಳನ್ನು ವಿದ್ಯಾರ್ಥಿ ವೇತನ ವೇದಿಕೆಯು ಪರಿಶೀಲಿಸಿ ಅರ್ಹರಾದ ಸಮಾಜ ಬಾಂಧವ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ವಿತರಿಸಲಾಗಿದೆ. ಯು.ಜಿ., ಪಿ.ಜಿ., ಬಿ.ಇ., ಪಿ.ಯು.ಸಿ. ಹಾಗೂ ಇತರ ವೃತ್ತಿಪರ ತರಗತಿಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಒಟ್ಟು ರೂ. 2,03,500 ಮೊಬಲಗನ್ನು ವಿದ್ಯಾರ್ಥಿವೇತನವಾಗಿ ವಿತರಿಸಲಾಗಿದೆ.

**ಡಾ| ದಯಾನಂದ ರಾವ್ ಸಾಲ ವಿದ್ಯಾರ್ಥಿ ವೇತನ :**

ಡಾ| ದಯಾನಂದ ರಾವ್ ಸಾಲ ವಿದ್ಯಾರ್ಥಿ ವೇತನಕ್ಕೆ ಸಾಲ ಕೇಳಿ ಬಂದ ಅರ್ಜಿಗಳನ್ನು ಪರಿಶೀಲಿಸಲಾಗಿದೆ. ಅದರಂತೆ ನಮ್ಮ ಸಮಾಜದ ಸ್ನಾತಕೋತ್ತರ, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಓದುತ್ತಿರುವ ವಿದ್ಯಾರ್ಥಿಗಳಿಗೆ ಸಾಲ ವಿದ್ಯಾರ್ಥಿ ವೇತನವನ್ನು ವಿತರಿಸಲಾಗಿದೆ. ಹಲವು ವೃತ್ತಿಪರ ತರಗತಿಗಳು ಇನ್ನು ಪ್ರಾರಂಭಗೊಳ್ಳಬೇಕಾದ್ದರಿಂದ ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿಗಳು ಬರುತ್ತಲೇ ಇವೆ. ಈ ವರ್ಷ ಡಿಸೆಂಬರ್ ತಿಂಗಳ ತನಕವೂ ಸಾಲ ಅರ್ಜಿಗಳನ್ನು ಸ್ವೀಕರಿಸಿ ಪರಿಶೀಲಿಸಿ ಸಾಲ ವಿವರಿಸುವಂತೆ ನಿರ್ಣಯ ಮಾಡಲಾಗಿದೆ.

**ಸಾಂಸ್ಕೃತಿಕ ಕಾರ್ಯಕ್ರಮ**

ಮಧ್ಯಾಹ್ನ ಊಟದ ನಂತರ ಮಹಿಳಾ ವೇದಿಕೆಯು ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಭರತನಾಟ್ಯ, ನೃತ್ಯಗಳು, ಹಾಡು ಮತ್ತು ಸಾಮೂಹಿಕ ನೃತ್ಯಗಳನ್ನು ಒಳಗೊಂಡ ಈ ಕಾರ್ಯಕ್ರಮದಲ್ಲಿ ಮಹಿಳೆಯರು, ಮಕ್ಕಳು ಪಾಲ್ಗೊಂಡು ಮನರಂಜಿಸಿದರು. ಶ್ರೀಮತಿ ಪ್ರೀತಿ ಎಸ್. ರಾವ್ ಕಾರ್ಯಕ್ರಮ ಸಂಯೋಜನೆ ಮಾಡಿದ್ದರು. ಕೊನೆಯಲ್ಲಿ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಸದಸ್ಯರಿಂದ ವೀರ ಬರ್ಬರಿಕ ಎಂಬ ಪೌರಾಣಿಕ ಯಕ್ಷಗಾನ ಪ್ರಸಂಗವನ್ನು ಪ್ರದರ್ಶಿಸಿದರು.

**ಸಭಾ ಕಾರ್ಯಕ್ರಮ**

ನಂತರ ನಡೆದ ಸಭಾಕಾರ್ಯಕ್ರಮದಲ್ಲಿ ಮಂಜುನಾಥ ಹೆಬ್ಬಾರ್ ಅಧ್ಯಕ್ಷತೆ ನಿರ್ವಹಿಸಿದರು, ಕಾರ್ಯದರ್ಶಿ ಪ್ರಭಾಕರ ಭಂಡಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯ ನಮ್ಮ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಒಟ್ಟು 4 ಉದಯಚಂದ್ರ ಪ್ರತಿಭಾ ಪುರಸ್ಕಾರವನ್ನು ವಿತರಿಸಲಾಯಿತು. ವಿದ್ಯಾರ್ಥಿ ವೇತನವನ್ನು ಸಾಂಕೇತಿಕವಾಗಿ ವಿತರಿಸಲಾಯಿತು. ಅತಿಥಿಗಳಾಗಿದ್ದ ಮಾಜಿ ಅಧ್ಯಕ್ಷ ಸಿ.ಎಸ್. ರಾವ್ ಕಾರ್ಯಕ್ರಮದ ಯಶಸ್ಸಿಗೆ ಸಂತಸ ವ್ಯಕ್ತ ಪಡಿಸಿದರು. ನಂತರ ಅಂದಿನ ಸ್ಪರ್ಧಾ ವಿಜೇತರಿಗೆ ಬಹುಮಾನ ಹಾಗೂ ಪ್ರಮಾಣಪತ್ರವನ್ನು ವಿತರಿಸಲಾಯಿತು. ಅಧ್ಯಕ್ಷರ ಮಾತಿನಲ್ಲಿ ಮಂಜುನಾಥ ಹೆಬ್ಬಾರ್ ಸಮಾಜಬಾಂಧವರ ಸಹಕಾರದಿಂದಲೇ ಸಂಘ ಒಳ್ಳೆಯ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಯಿತು. ಮುಂದೆಯೂ ಎಲ್ಲರೂ ಉತ್ತಮ ಸಹಕಾರ ನೀಡಿ ಸಂಘದ ಬೆಳವಣಿಗೆಗೆ ಕಾರಣರಾಗಬೇಕೆಂದು ವಿನಂತಿ ಮಾಡಿದರು. ಸಂಘದ ಉಪಾಧ್ಯಕ್ಷರಾದ ಅರವಿಂದ್ ಕುಮಾರ್ ಮತ್ತು ಜಯರಾಮ ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ನಿರ್ದೇಶಕ ಕೃಷ್ಣಮೂರ್ತಿ ರಾವ್ ಬ್ರಹ್ಮಾವರ ಸ್ಪರ್ಧಾ ವಿಜೇತರ ಪಟ್ಟಿ ವಾಚಿಸಿದರು. ಕೋಶಾಧಿಕಾರಿ ಗಣೇಶ ಹೆಬ್ಬಾರ್ ವಂದನಾರ್ಪಣೆ ಮಾಡಿದರು. ನಿರ್ದೇಶಕ ಕೃಷ್ಣಕುಮಾರ್ ರಾವ್ ಮಟ್ಟು ಕಾರ್ಯಕ್ರಮ ಸಂಯೋಜನೆ ಮಾಡಿದರು.

**ಕೃತಜ್ಞತಾರ್ಪಣೆ**

ನವರಾತ್ರಿಯು ಸಡಗರದಿಂದ ನೆರವೇರಿದೆ. ಈ ಕಾರ್ಯಕ್ರಮ ಸಾಂಗವಾಗಿ ನೆರವೇರಲು ಹತ್ತು ಹಲವು ಕೈಗಳು ಒಂದು ಸೇರಿವೆ. ಈ ಮೂಲಕ "ಒಗ್ಗಟ್ಟಿನಲ್ಲಿ ಬಲವಿದೆ" ಎಂಬ ಮಾತನ್ನು ಮತ್ತೊಮ್ಮೆ ಸಾದರಪಡಿಸಿದಂತಾಗಿದೆ. ಈ ನವರಾತ್ರಿಯಲ್ಲಿ ನಮ್ಮೊಂದಿಗೆ ಸಹಕರಿಸಿದ ಎಲ್ಲಾ ಋತ್ವಿಜರಿಗೆ, ಯಾಗದ ಕರ್ತೃಗಳಿಗೆ, ದಾನಿಗಳಿಗೆ, ವಿವಿಧ ರೀತಿಯ ಸೇವೆ ಕೊಟ್ಟ ಎಲ್ಲಾ ಭಕ್ತ ಬಾಂಧವರಿಗೆ, ದುರ್ಗಾನಮಸ್ಕಾರ ಸೇವೆ ಕೊಟ್ಟ ಎಲ್ಲಾ ಸಮಾಜ ಬಾಂಧವರಿಗೆ, ವಸ್ತು ರೂಪದಲ್ಲಿ ಸಹಕರಿಸಿದ ದಾನಿಗಳಿಗೆ, ಶ್ರೀ ಶಾರದಾ ಮಾತೆಗೆ ಸೀರೆ, ಅಲಂಕಾರಕ್ಕೆ ಹೂ ಹಾಗೂ ಆಭರಣಗಳನ್ನು ಅರ್ಪಿಸಿದ ಮಹನೀಯರಿಗೆ, ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಎಲ್ಲರಿಗೆ, ಯಕ್ಷಗಾನ ಪ್ರದರ್ಶಿಸಿದ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಮಂಡಳಿಗೆ, ತನು–ಮನ–ಧನಗಳಿಂದ ಸಹಕರಿಸಿದ ಸಮಾಜಬಾಂಧವರಿಗೆ, ಸದಸ್ಯರಿಗೆ, ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಿದ ವೈದಿಕರು ಹಾಗೂ ದೇವಸ್ಥಾನದ ಅರ್ಚಕರಿಗೆ, ಎಲ್ಲಾ ರೀತಿಯ ವ್ಯವಸ್ಥೆಗಳಲ್ಲಿ ಸಹಕರಿಸಿದ ಮೆನೇಜರ್‌ರವರಿಗೆ ಸಂಘದ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಆಡಳಿತ ಮಂಡಳಿ ಕೃತಜ್ಞತೆಯನ್ನು ಸಲ್ಲಿಸುತ್ತದೆ.

**ಉದಯಚಂದ್ರ ಪ್ರತಿಭಾ ಪುರಸ್ಕಾರ :**

**ಎಸ್.ಎಸ್.ಎಲ್.ಸಿ.** – ಕುಮಾರಿ ಕೆ.ಎನ್. ಅಂಬಿಕಾ, D/o ದಿ| ನಾಗಭೂಷಣ ಶಾಸ್ತ್ರಿ, ಮುಂಡ್ಕೂರು.

**ಪಿ.ಯು.ಸಿ. :**

**ವಾಣಿಜ್ಯ ವಿಭಾಗ** – ಅಖಿಲೇಶ್ ಎಸ್. ರಾವ್, ಬಿನ್ ದಿ| ಸುನೀಲ್ ಡಿ. ರಾವ್, ಪ್ರಶಾಂತಿ ಎಸ್. ರಾವ್ ಪಡುಬಿದ್ರೆ.

**ಕಲಾ ವಿಭಾಗ** – ಅನುಷಾ, D/o ರಘುರಾಮ್, ಪುನಾರ್ ಮನೆ, ಬಜೆಗೋಳಿ,

**ವಿಜ್ಞಾನ ವಿಭಾಗ** – ಶ್ರೀದತ್ತ ಎಂ. ಹೆಬ್ಬಾರ್, ಬಿನ್ ಮಂಜುನಾಥ ಹೆಬ್ಬಾರ್, ಮಾಲೆಬೆಟ್ಟು, ವರಂಗ.

### ಸಂಘಕ್ಕೆ ದೇಣಿಗೆ ಹಾಗೂ ಕೊಡುಗೆಗಳು

**ಡಾ| ಶರತ್ ರಾವ್ ಹಾಗೂ ಅವರ ಸಹೋದರಿಯರಾದ ಡಾ| ಶರಣ್ಯ ಭಟ್, ಡಾ| ಸಂಧ್ಯಾ ಭಟ್ ಶ್ರೀ ಶಾರದೆಗೆ ಅಂದಾಜು ಮೌಲ್ಯ 13,00,000 ರೂಪಾಯಿಯ ಚಿನ್ನದ ವಿಶೇಷ ಹಾರವನ್ನು ನೀಡಿರುತ್ತಾರೆ. ಶ್ರೀಮತಿ ಜ್ಯೋತಿ ಹಾಗೂ ಸುಧಾಕರ್ ರಾವ್ ದಂಪತಿಗಳು ಶ್ರೀ ಶಾರದೆಗೆ ಬೆಳ್ಳಿಯ ಪೂಜಾ ಪರಿಕರಗಳನ್ನು ನೀಡಿರುತ್ತಾರೆ. ಅಜಿತ್ ರಾವ್ ಮೆನೇಜರ್ ಮಂದಿರಕ್ಕೆ ಬೆಳ್ಳಿಯ ಘಂಟಾಮಣಿಯನ್ನು ನೀಡಿರುತ್ತಾರೆ. ಪರೀಕ ದೇವರಾವ್ ಸ್ಮರಣಾರ್ಥ ಅವರ ಪುತ್ರ ಮುರುಳೀಧರ ದೇವರಾವ್ ಶಾನುಭಾಗ್ ಸಾಂಗ್ಲಿ ಭಾವಚಿತ್ರ ಅನಾವರಣಕ್ಕೆ ರೂ. 25,000 ನೀಡಿರುತ್ತಾರೆ. ರಂಗಯ್ಯ ಹೆಬ್ಬಾರ್ ಸ್ಮರಣಾರ್ಥ ಅವರ ಪುತ್ರ ಕೆ. ಪ್ರಕಾಶ್ ಹೆಬ್ಬಾರ್ ಭಾವಚಿತ್ರ ಅನಾವರಣಕ್ಕೆ ರೂ.25,000 ನೀಡಿರುತ್ತಾರೆ. ಚಂಡುಕಲಾ ಗಣೇಶ್ ರಾವ್ ಹವಾನಿಯಂತ್ರಿತ ಕಟ್ಟಡಕ್ಕೆ ರೂ.10,000ನ್ನು ನೀಡಿರುತ್ತಾರೆ.**

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್    ಸಂಪರ್ಕ ಸಂಖ್ಯೆ 9611099894

# ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಕಾಸರಗೋಡು – ವಾರ್ಷಿಕ ಮಹಾಸಭೆ ಮತ್ತು ಜಿಲ್ಲಾ ಸಮಾವೇಶ



ಕಾಸರಗೋಡು ಸ್ಥಾನಿಕ ಬ್ರಾಹ್ಮಣ ಸಭಾದ ವಾರ್ಷಿಕ ಮಹಾಸಭೆ ಮತ್ತು ಜಿಲ್ಲಾ ಸಮಾವೇಶವು ದಿನಾಂಕ 05.11.2023 ರವಿವಾರ ಕೂಡ್ಲು, ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಭಾಂಗಣದಲ್ಲಿ ನಡೆಯಿತು. ಕೆ.ಜಿ. ಶ್ಯಾನುಭೋಗ್ ಅಧ್ಯಕ್ಷತೆ ವಹಿಸಿದ್ದ ಮಹಾಸಭೆಯಲ್ಲಿ ಗತವರ್ಷದ ಅವಧಿಯಲ್ಲಿ ದೈವಾಧೀನರಾದ ಬಂಧುಗಳಿಗೆ ಗೌರವ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಆ ಬಳಿಕ ಕಾರ್ಯದರ್ಶಿ ಮನೋಹರ ಎ. ಮತ್ತು ಮಹಿಳಾ ಘಟಕದ ಕಾರ್ಯದರ್ಶಿ ಶ್ರೀಮತಿ ಮಾಲತೀ ಜಗದೀಶ್ ಇವರು ಗತವರ್ಷದ ವರದಿ ಮಂಡನೆ ಮಾಡಿದರು. ಕೋಶಾಧಿಕಾರಿ ವಸಂತರಾಜ ವಿ.ಪಿ. ಹಾಗೂ ಮಹಿಳಾ ಘಟಕದ ಕೋಶಾಧಿಕಾರಿ ಶ್ರೀಮತಿ ಸುಮಂಗಲಾ ಮನೋಹರ್ ಇವರು ಲೆಕ್ಕಪತ್ರಗಳನ್ನು ಮಂಡಿಸಿದರು. ಮಹಾಸಭೆಯು ಅವುಗಳನ್ನು ಅಂಗೀಕರಿಸಿತು.

ಅನಂತರ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ನಮ್ಮ ಬಾಂಧವರೇ ಆದ ಇಸ್ರೊ ವಿಜ್ಞಾನಿ ಕೃಷ್ಣಮೋಹನ ಶ್ಯಾನುಭೋಗ್, ಎರೆಪ್ಪಾಡಿ ಇವರು ಸಭಾದ ವಾರ್ಷಿಕ ಸಂಚಿಕೆ "ಶಿವಗಂಗಾ"ವನ್ನು ಬಿಡುಗಡೆ ಮಾಡಿದರು. ಇಸ್ರೋದ ಮೂಲಕ ಚಂದ್ರಯಾನ 3, ಗಗನಯಾನ ಮುಂತಾಗಿ ದೇಶದ ಬಾಹ್ಯಾಕಾಶ ಸಂಶೋಧನಾ ಕಾರ್ಯಗಳಿಗೆ ನೆರವಾಗುತ್ತಿರುವ ಶ್ರೀಯುತರನ್ನು ಸನ್ಮಾನಿಸಿ ಗೌರವಿಸಲಾಯಿತು. ಅವರಿಗೆ "ಸಮಾಜ ರತ್ನ ಪ್ರಶಸ್ತಿ" (ಪ್ರಾಯೋಜಕರು: ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ, ಕಾಸರಗೋಡು)ಯನ್ನೂ ನೀಡಿ ಆದರಿಸಲಾಯಿತು. ಕೂಡ್ಲು ವಿಷ್ಣುಮಂಗಲದ ಹವ್ಯಾಸಿ ಲೇಖಕ, ನಿವೃತ್ತ ಬ್ಯಾಂಕ್ ಉದ್ಯೋಗಿ ವಿಷ್ಣು ಶ್ಯಾನುಭೋಗ್ (ಶಾನ್ ಕಾಸರಗೋಡು) ಇವರು ಸಂಪಾದಿಸಿದ ಕ್ಷೇತ್ರ ಪರಿಚಯ ಕೃತಿ "ಕುತ್ಯಾಳ ಶ್ರೀ"ಯನ್ನು ಮುರಳೀಧರ ಕಾಸರಗೋಡು ಇವರು ಬಿಡುಗಡೆ ಮಾಡಿದರು. ಈ ಕೃತಿಯ ಮಲಯಾಳಂ ಅನುವಾದಕರಾದ ಮಹಾಲಿಂಗೇಶ್ವರ ರಾಜ್ ಇವರು ಕೃತಿ ಪರಿಚಯ ಮಾಡಿದರು. ಮಹಿಳಾ ಘಟಕದ ಉಪಾಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮೀ ಶ್ಯಾನುಭೋಗ್ ಸ್ವಾಗತಿಸಿ ಜತೆ ಕಾರ್ಯದರ್ಶಿ ಶ್ರೀಮತಿ ನಯನಾ ಶಂಕರರಾಜ್ ವಂದಿಸಿದರು.

ಆ ಬಳಿಕ ಸಮಾಜದ ಕಲಾವಿದ–ಕಲಾವಿದೆಯರಿಂದ ಹಾಡು, ನೃತ್ಯ, ಹಾಸ್ಯ ಮುಂತಾದ ವೈವಿಧ್ಯಮಯವಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಹೆಸರಾಂತ ಲೇಖಕ – ಕಲಾವಿದರಾದ ಶ್ರೀ ರಾಂ ಎಲ್ಲಂಗಳ ಇವರು ಬರೆದು, ನಿರ್ದೇಶಿಸಿ ಸ್ವತಃ ಅಭಿನಯಿಸಿದ "ಶ್ರೀ ಕುತ್ಯಾಳ ಕ್ಷೇತ್ರ ವೈಭವ" ನೃತ್ಯ ರೂಪಕವು ಪ್ರಧಾನ ಆಕರ್ಷಣೆಯಾಗಿತ್ತು.

ಅಪರಾಹ್ನ ನಡೆದ ಜಿಲ್ಲಾ ಸಮಾವೇಶವನ್ನು ನಮ್ಮ ಬಂಧುವೇ ಆದ ಡಾ। ಈಶ್ವರ ಚಂದ್ರ ಚೇನೆಕ್ಕೋಡು (ಡೀನ್, ಟಿ ಐ.ಎಫ್.ಆರ್ ಪುಣೆ) ಇವರು ಉದ್ಘಾಟಿಸಿ, ಸಂಘಟನೆಗೆ ಶುಭವನ್ನು ಹಾರೈಸಿದರು. ಸಮಾಜದ ಹಿರಿಯ ಸದಸ್ಯ, ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕರಾದ ಮರ್ದಂಬೈಲು ಉಮೇಶ ರಾವ್ ಇವರು ಸಭಾಕ್ಕೆ ಸ್ವಂತವಾದ ಕಟ್ಟಡವೊಂದನ್ನು ನಿರ್ಮಿಸಬೇಕೆಂಬ ಆಶಯವನ್ನು ತಮ್ಮ ಪ್ರತಿನಿಧಿಗಳ ಮೂಲಕ ಮಂಡಿಸಿ ರೂ.1 ಲಕ್ಷ ದೇಣಿಗೆ ನೀಡಿ ಕಟ್ಟಡ ನಿರ್ಮಾಣ ನಿಧಿಗೆ ಚಾಲನೆ ನೀಡಿದರು.

ಆ ಬಳಿಕ ಸಮಾಜದ ಹಿರಿಯ ಚೇತನಗಳಾದ ರಾಮಕೃಷ್ಣ ಮರ್ದಂಬೈಲು ಮತ್ತು ಶ್ರೀಮತಿ ಸಾಗರಿ ಮರ್ದಂಬೈಲು ಇವರಿಗೆ ಗೌರವಾರ್ಪಣೆ ಮಾಡಲಾಯಿತು. ವಿವಿಧ ಪ್ರಾಯೋಜಿತ ಪ್ರಶಸ್ತಿಗಳನ್ನು ಪ್ರಧಾನ ಮಾಡಲಾಯಿತು. ಕಂಬಾರು ಕೇಶವ ಭಟ್ (ಯಕ್ಷಸಿರಿ), ಗೋಪಾಲಕೃಷ್ಣ ರಾವ್ ಬೇವಿಂಜೆ (ಸಮಾಜ ಸೇವೆ), ಶ್ರೀಮತಿ ಪ್ರಭಾ ರಮೇಶ್ ಮಧೂರು (ಸಮಾಜ ಕೀರ್ತಿ), ಕು। ಶ್ರಾವ್ಯಶ್ರೀ ಉಬರಳೆ (ಕಲಾಸಿರಿ), ಮಾ। ಬೃಜೇಶ್ ಮೋಹನ್ (ಕ್ರೀಡಾರತ್ನ) ಕು। ವಿಸ್ಮಯಾ ಕುಂಬಳೆ (ಲಲಿತ ಕಲೆ) ಇವರು ಪುರಸ್ಕೃತರು. ಶೈಕ್ಷಣಿಕ ರಂಗದಲ್ಲಿ ಶ್ರೇಷ್ಠ ಸಾಧಕರಿಗೆ ಪ್ರತಿಭಾ ಪುರಸ್ಕಾರ, ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ, ವಿವಿಧ ಸ್ಪರ್ಧಾವಿಜೇತರಿಗೆ ಬಹುಮಾನ ವಿತರಣೆ, ಮಕ್ಕಳಿಗೆ ಸವಿನೆನಪಿನ ಉಡುಗೊರೆ ವಿತರಣೆ ಮುಂತಾದ ಕಾರ್ಯಕ್ರಮಗಳೊಂದಿಗೆ ಸಮಾರಂಭವು ಮುಕ್ತಾಯಗೊಂಡಿತು. ಡಾ। ಎಂ. ಸತ್ಯನಾಥ್ ಸ್ವಾಗತಿಸಿ, ಕಾರ್ಯದರ್ಶಿ ಮನೋಹರ ಎ. ವಂದಿಸಿದರು. ಪ್ರೊ। ಶ್ರೀನಾಥ್, ಶ್ರೀ ರಾಂ ಎಲ್ಲಂಗಳ, ರಾಜೇಂದ್ರ ಬಜಕೂಡ್ಲು, ಶ್ರೀಮತಿಯರಾದ ನಯನಾ ಶಂಕರರಾಜ್, ವಿಜಯಲಕ್ಷ್ಮಿ ಉಬರಳೆ, ಶರ್ಮಿಳಾ ಎ.,ವೀಣಾ ಪ್ರಸನ್ನ ಶ್ಯಾನುಭೋಗ್ ನಿರೂಪಣೆಯಲ್ಲಿ ಸಹಕರಿಸಿದರು.

*With Best Complimemts From*

**SRI M. SHAILESH RAO** Ph : 9448624324
B.E., Civil
**Civil Engineer & Contractor**
**SRI MALAVIKA ASSOCIATES**
KALSANKA-UDUPI ROAD, UDUPI.
**Website : shreemaalavikaassociates.com**

ದೂರವಾಣಿ ಸಂಖ್ಯೆ : 2522408

**ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ–1.

## ವಿಶೇಷ ಸಾಮಾನ್ಯ ಸಭೆಯ ಸೂಚನಾ ಪತ್ರ

ಮಾನ್ಯ ಸದಸ್ಯರೇ,

ನಮ್ಮ ಸಂಘದ ವಿಶೇಷ ಸಾಮಾನ್ಯ ಸಭೆಯು ದಿನಾಂಕ 25.11.2023ನೇ ಶನಿವಾರ ಅಪರಾಹ್ನ ಗಂಟೆ 3.30ಕ್ಕೆ ಸರಿಯಾಗಿ ಸಂಘದ ಪ್ರಧಾನ ಕಛೇರಿ ಇರುವ ಭೂ–ವರಾಹ ಸಂಕೀರ್ಣದ ಸಭಾಂಗಣ ಉಡುಪಿಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಂ. ಸದಾನಂದ ರಾವ್‌ರವರ ಅಧ್ಯಕ್ಷತೆಯಲ್ಲಿ ಈ ಕೆಳಗಿನ ಕಾರ್ಯಸೂಚಿಯಂತೆ ಜರಗಲಿದೆ. ಅಂದಿನ ಸಭೆಗೆ ಎಲ್ಲಾ ಸದಸ್ಯರು ಹಾಜರಾಗಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗಿಗಳಾಗಬೇಕಾಗಿ ಕೋರಲಾಗಿದೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ


ಸ್ಥಳ : ಉಡುಪಿ — ಎನ್. ಪಟ್ಟಾಭಿರಾಮ ರಾವ್
ದಿನಾಂಕ : 30.09.2023 — ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

### ಕಾರ್ಯಸೂಚಿ

(ಕಛೇರಿ ಟಿಪ್ಪಣಿಯೊಂದಿಗೆ)

1. ಅಧ್ಯಕ್ಷರ ಆಸನ ಸ್ವೀಕಾರ
2. ಪ್ರಾರ್ಥನೆ
3. ಸ್ವಾಗತ
4. ವಿಶೇಷ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಅನುಮೋದಿಸುವ ಕುರಿತು.
   ಟಿಪ್ಪಣಿ : ವಿಶೇಷ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ನಿಯಮಾನುಸಾರ ಎಲ್ಲಾ ಸದಸ್ಯರುಗಳಿಗೆ ಅಂಚೆ ಮೂಲಕ ಕಳುಹಿಸಲಾಗಿದೆ. ಅಲ್ಲದೆ ಉದಯವಾಣಿ ದೈನಿಕದಲ್ಲಿ ಕೂಡಾ ಪ್ರಕಟಿಸಿದೆ. ಅನುಮೋದಿಸಬಹುದಾಗಿದೆ.
5. ಸಂಘಕ್ಕೆ ಸ್ವಂತ ಕಛೇರಿ ಕಟ್ಟಡ ಖರೀದಿಸುವ ಕುರಿತು.
   ಟಿಪ್ಪಣಿ : ದಿನಾಂಕ 09.09.2023ರಂದು ಜರಗಿದ ವಾರ್ಷಿಕ ಸಾಮಾನ್ಯ ಸಭೆಯು ತನ್ನ ನಿರ್ಣಯ ನಂ. 09 ರಲ್ಲಿ ಕಟ್ಟಡ ಖರೀದಿ ಬಗ್ಗೆ ವಿಸ್ತೃತ ಚರ್ಚೆ ನಡೆಸುವರೆ ವಿಶೇಷ ಮಹಾಸಭೆ ಕರೆಯುವಂತೆ ತೀರ್ಮಾನಿಸಿದ ಹಿನ್ನಲೆಯಲ್ಲಿ ದಿನಾಂಕ 30.09.2023ರಂದು ಜರಗಿದ ಆಡಳಿತ ಮಂಡಳಿ ಸಭೆಯು ತನ್ನ ನಿ. ನಂ.10 ರಲ್ಲಿ ಕಟ್ಟಡ ಖರೀದಿ ಬಗ್ಗೆ ವಿಶೇಷ ಮಹಾಸಭೆ ಕರೆಯುವರೆ ತೀರ್ಮಾನಿಸಿದಂತೆ ಸೂಕ್ತ ಕ್ರಮ ಜರಗಿಸಬಹುದಾಗಿದೆ.
6. ವಂದನಾರ್ಪಣೆ

ಸದಸ್ಯರ ಗಮನಕ್ಕೆ : ರೂ.100/– ಮುಖಬೆಲೆಯ 1 ಷೇರು ಧನವನ್ನು ಪಡೆದುಕೊಂಡಿರುವ ಸದಸ್ಯರು ಷೇರು ಧನವನ್ನು ಕನಿಷ್ಠ ರೂ.500/–ರ (5 ಷೇರು ಧನಕ್ಕೆ) ಶೇರಿಗೆ ಪರಿವರ್ತಿಸಿಕೊಳ್ಳಬೇಕಾಗಿ ವಿನಂತಿ.



**RAJESH POWER PRESS**
**PRINTERS & PUBLISHERS**
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
**QUALITY FIRST AND ALWAYS**






## ಶುಭ ವಿವಾಹ

ಶ್ರೀಮತಿ ಆಶಾಲತಾ ಮತ್ತು ಶ್ರೀ ಸದಾಶಿವ ರಾವ್ (ಮೂಡುಪಜ್ಜೈ, ಕುಂಜಾರುಗಿರಿ) ದಂಪತಿಯ ಪುತ್ರಿ **ಚಿ। ಸೌ। ಆಶಿತಾ**ರವರ ವಿವಾಹವು ದಿ। ಶ್ರೀ ಅನಿಲ್‌ಕುಮಾರ್ ಶ್ರೀನಿವಾಸ್ ರಾವ್ (ನಂದಳಿಕೆ ಮೂಡುಮನೆ) ಮತ್ತು ಶ್ರೀಮತಿ ಭಾರತಿಲಕ್ಷ್ಮೀ (ಕೊಲ್ಹಾಪುರ) ಅವರ ಪುತ್ರ **ಚಿ। ನಂದಕುಮಾರ್**‌ರವರೊಂದಿಗೆ ತಾ.16.10.2023 ರಂದು ವ್ಯಾಸಮಧ್ವ ಸಭಾಭವನ ಪಾಜಕ ಕ್ಷೇತ್ರ, ಕುಂಜಾರುಗಿರಿಯಲ್ಲಿ ಜರಗಿತು.

**** ****

ಶ್ರೀ ಕಾಪು ಮಂಜುನಾಥ್ ರಾವ್ ಮತ್ತು ಶ್ರೀಮತಿ ಭುವನೇಶ್ವರಿ ದಂಪತಿಯ ಪುತ್ರಿ **ಚಿ। ಸೌ। ಪಲ್ಲವಿ** ಅವರ ವಿವಾಹವು ಶ್ರೀ ಬಳ್ಕೆಕಿಲ ಅರವಿಂದ್ ರಾವ್ ಮತ್ತು ಶ್ರೀಮತಿ ಸಾವಿತ್ರಿ ದಂಪತಿಯ ಪುತ್ರ **ಚಿ। ಸೌರಭ್**‌ರವರೊಂದಿಗೆ ತಾ.26.10.2023 ರಂದು ಹೊಸಬೆಟ್ಟುವಿನ ನವಗಿರಿ ಕಲ್ಯಾಣ ಮಂಟಪದಲ್ಲಿ ಜರಗಿತು.

**** ****

ಡಾ। ಶ್ರೀಮತಿ ಶೋಭಾ ರಾವ್ ಮತ್ತು ಡಾ। ರಮೇಶ್ ರಾವ್ ದಂಪತಿಯ ಪುತ್ರ **ಚಿ। ಅಶ್ವಥ್**‌ರ ವಿವಾಹವು ನೆಂಪು ಶ್ರೀಮತಿ ವೀಣಾ ಮತ್ತು ಶ್ರೀ ವಿಶ್ವೇಶ್ವರ ಭಟ್ ದಂಪತಿಯ ಪುತ್ರಿ **ಚಿ। ಸೌ। ಅಖಿಲ**ರವರೊಂದಿಗೆ ತಾ.26.10.2023 ರಂದು ಕೋಟೇಶ್ವರದ ಸರಸ್ವತಿ ಕಲ್ಯಾಣ ಮಂಟಪದಲ್ಲಿ ಜರಗಿತು.

**** ****

ಶ್ರೀ ಚಂದ್ರಶೇಖರ್ ಮತ್ತು ಶ್ರೀಮತಿ ಭಾರತಿ ದಂಪತಿಯ ಪುತ್ರಿ **ಚಿ। ಸೌ। ಅಂಕಿತಾ** ರಾವ್ ಅವರ ವಿವಾಹವು ಶ್ರೀ ತ್ಯಾಗರಾಜ್ ಮತ್ತು ಶ್ರೀಮತಿ ಭುವನೇಶ್ವರಿ ದಂಪತಿಯ ಪುತ್ರ **ಚಿ। ಸಚಿನ್ ಆಚಾರ್ಯ**ರವರೊಂದಿಗೆ ತಾ.01.11.2023 ರಂದು ಮೈಸೂರಿನ ಮಾಧವ ಶೆಣೈ ಕಲ್ಯಾಣ ಮಂಟಪದಲ್ಲಿ ಜರಗಿತು.

**** ****

ಶ್ರೀಮತಿ ಎಂ. ವತ್ಸಲಾ ಮತ್ತು ಶ್ರೀ ಎಂ. ಉಮೇಶ ರಾವ್ ದಂಪತಿಯ ಪುತ್ರಿ **ಚಿ। ಸೌ। ಚೇತನಾ** ಅವರ ವಿವಾಹವು ಶ್ರೀಮತಿ ಸ್ವರ್ಣಗೌರಿ ಮತ್ತು ರಾಮ ಶರ್ಮ ದಂಪತಿಯ ಪುತ್ರ **ಚಿ। ಪ್ರಿಯ ಮೇಧ ಶರ್ಮ**ರವರೊಂದಿಗೆ ತಾ.01.11.2023ರಂದು ಉಡುಪಿ ಕುಂಜಿಬೆಟ್ಟುವಿನ 'ಶ್ರೀ ಶಾರದಾ ಮಂಟಪ'ದಲ್ಲಿ ಜರುಗಿತು.

### ಸುರತ್ಕಲ್ ಸಂಘದ ವಾರ್ಷಿಕ ಮಹಾಸಭೆಯ ವರದಿ...

...2ನೇ ಪುಟದಿಂದ

ಮಂಡಳಿಯನ್ನು ರಚಿಸಲಾಯಿತು.

ಗೌರವಾಧ್ಯಕ್ಷರಾಗಿ ಭವಾನಿಶಂಕರ ರಾವ್, ಅಧ್ಯಕ್ಷರಾಗಿ ರಾಘವೇಂದ್ರ ರಾವ್ ಸಿ., ಉಪಾಧ್ಯಕ್ಷರಾಗಿ ವಾಸುದೇವ ಶ್ಯಾನುಭೋಗ ಮತ್ತು ಶ್ರೀಮತಿ ಪರಿಮಳಾ ಪ್ರಶಾಂತ್, ಕಾರ್ಯದರ್ಶಿಗಳಾಗಿ ಪಾಲಚಂದ್ರಶರ್ಮ, ಜೊತೆ ಕಾರ್ಯದರ್ಶಿಗಳಾಗಿ ಪ್ರವೀಣ್ ಕುಮಾರ್ ಮತ್ತು ಜನಕರಾಜ್, ಕೋಶಾಧಿಕಾರಿಯಾಗಿ ರಾಧಾಕೃಷ್ಣರಾವ್, ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಶಿವಪ್ರಸಾದ್ ಶ್ಯಾನುಭೋಗ್, ಸಿ. ಸುದರ್ಶನ್ ರಾವ್, ಹರಿನಾರಾಯಣ ರಾವ್, ಸತೀಶ್ಚಂದ್ರ ರಾವ್, ಶ್ರೀಮತಿ ಶುಭಾ ಜಗದೀಶ್, ಕೆ. ಮಂಜುನಾಥ ರಾವ್ ಹಾಗೂ ಸಿ. ಸುರೇಶ್ ರಾವ್ ಅಂತೆಯೇ ಗೌರವಸಲಹೆಗಾರರಾಗಿ ಮತ್ತು ವಿಶೇಷ ಆಹ್ವಾನಿತರಾಗಿ ಕೆ. ಮಾಧವರಾವ್, ವೈ.ವಿ. ರತ್ನಾಕರ ರಾವ್, ಗೋಪಾಲಕೃಷ್ಣ, ಕೆ. ಪ್ರಭಾಕರ ರಾವ್ ಹಾಗೂ ಪಿ. ಜಗದೀಶ್ ಇವರು ಆಯ್ಕೆಯಾಗಿರುತ್ತಾರೆ.

ಮಹಿಳಾವೇದಿಕೆಗೆ ಅಧ್ಯಕ್ಷರಾಗಿ ಶ್ರೀಮತಿ ಸುನೀತಾ ಶ್ರೀಕಾಂತ್, ಉಪಾಧ್ಯಕ್ಷರಾಗಿ ಶ್ರೀಮತಿ ವೀಣಾ ಅರವಿಂದ್, ಕಾರ್ಯದರ್ಶಿಯಾಗಿ ಶ್ರೀಮತಿ ಸಾವಿತ್ರಿ ಪುಷ್ಪರಾಜ್, ಜೊತೆಕಾರ್ಯದರ್ಶಿ ಹಾಗೂ ಇನ್ನುಳಿದ 8 ಸದಸ್ಯರು ಆಯ್ಕೆಯಾದರು.

ಯುವವೇದಿಕೆಯ ಅಧ್ಯಕ್ಷರಾಗಿ ಸಂದೀಪ್ ಶ್ಯಾನುಭೋಗ್, ಉಪಾಧ್ಯಕ್ಷರಾಗಿ ಅಶ್ವಿನ್‌ಕುಮಾರ್, ಕಾರ್ಯದರ್ಶಿಯಾಗಿ ಸಂಕೇತ್ ಶ್ಯಾನುಭೋಗ್, ಅವರೊಂದಿಗೆ ಜೊತೆಕಾರ್ಯದರ್ಶಿ ಹಾಗೂ 8 ಸದಸ್ಯರುಗಳು ಆಯ್ಕೆಗೊಂಡಿರುತ್ತಾರೆ.

ಕೆ. ಪ್ರಭಾಕರರಾಯರು ಸಂಘದ ಬೆಳವಣಿಗೆಗೆ ಪೂರಕವಾದ ಅಂಶಗಳನ್ನು ಹೇಳಿದರು. ಗೋಪಾಲಕೃಷ್ಣ ಇವರು ಧನ್ಯವಾದಗಳನ್ನು ತಿಳಿಸಿದರು.

ನಂತರ ನಡೆದ ಸಭೆಯಲ್ಲಿ ಹಿರಿಯರಾದ ಕರುಣಾಕರ ಶರ್ಮ ತಡಂಬೈಲ್, ಶ್ರೀಮತಿ ಸೀತಾರತ್ನ ಅನಂತಕೃಷ್ಣ ರಾವ್ ಹಾಗೂ ಝೀ ಕನ್ನಡ ಟಿ.ವಿ. ವಾಹಿನಿಯ ಸೀಸನ್ 19 ರನ್ನರ್‌ಅಪ್ ಆದ ನಮ್ಮ ಸಮಾಜದ ಬಾಲಪ್ರತಿಭೆಯಾದ ಕು। ತನುಶ್ರೀ ಮಂಗಳೂರು ಇವರನ್ನು ಸಭೆಯಲ್ಲಿ ಪರಿಚಯಿಸಿ ಸಮ್ಮಾನಿಸಲಾಯಿತು.

ಪ್ರಾರ್ಥನೆಯನ್ನು ಕು। ಸೌಜನ್ಯ ಪಾಲಚಂದ್ರಶರ್ಮರವರು ನೆರವೇರಿಸಿದರು. ಸಂಘದ ಅಧ್ಯಕ್ಷರಾದ ರಾಘವೇಂದ್ರ ರಾವ್ ಸಿ. ಇವರು ಎಲ್ಲರನ್ನೂ ಸ್ವಾಗತಿಸಿದರು. ಜ್ಯೋತಿ ಪ್ರಜ್ವಲನೆಯ ಬಳಿಕ ಹಿರಿಯರನ್ನು ಹಾಗೂ ಬಾಲಪ್ರತಿಭೆಯನ್ನು ಸನ್ಮಾನಿಸಲಾಯಿತು. ಸಂಘದ ವಿದ್ಯಾನಿಧಿ ಹಾಗೂ ದಾನಿಗಳ ಸಹಕಾರದಿಂದ ಸಂಘದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಯಿತು.

ಅತಿಥಿಗಳಾದ ದೇವಾನಂದಭಟ್, ಎಂ.ಆರ್. ವಾಸುದೇವ, ಕೇಶವ ರಾವ್ ಹಾಗೂ ಎಂ.ಕೆ. ಮೋಹನರಾವ್ ಇವರು ಪ್ರೋತ್ಸಾಹದ ಮಾತುಗಳನ್ನಾಡಿ ಶುಭ ಹಾರೈಸಿ ಸಹಕಾರವನ್ನು ಕೋರಿದರು.

ಮಹಿಳಾವೇದಿಕೆ, ಯುವವೇದಿಕೆ ಹಾಗೂ ಮಕ್ಕಳಿಂದ ನಡೆದ ಹಾಡು, ನೃತ್ಯ, ಭರತನಾಟ್ಯ ಹಾಗೂ ಪ್ರಹಸನದಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಶ್ರೀಮತಿ ಸುಧಾಮಣಿ ಪಾಲಚಂದ್ರ ಶರ್ಮ ಕಾರ್ಯಕ್ರಮಗಳ ನಿರೂಪಿಸಿದರು. ಪಾಲಚಂದ್ರಶರ್ಮ ಧನ್ಯವಾದವಿತ್ತರು.




## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-00ರಿಂದ

**ತಾ.30-11-2023 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.15-11-2023 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.18-11-2023 ಹಾಗೂ 02.12.2023 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ವೃಶ್ಚಿಕ ಮಾಸದ ವಿಶೇಷ ದಿನಗಳು

| | | | |
|---|---|---|---|
| 16.11.2023 | ವೃಶ್ಚಿಕ ಸಂಕ್ರಮಣ | 08.12.2023 | ಸ್ಮಾರ್ತೈಕಾದಶೀ, ಧರ್ಮಸ್ಥಳ ಲಕ್ಷದೀಪ |
| 24.11.2023 | ಉತ್ಥಾನ ದ್ವಾದಶಿ, ತುಳಸೀ ಪೂಜೆ, ಉಡುಪಿ ಶ್ರೀಕೃಷ್ಣ ಲಕ್ಷದೀಪಾರಂಭ | 09.12.2023 | ಭಾಗವತ–ವೈಷ್ಣವೈಕಾದಶೀ |
| | | 12.12.2023 | ಅಮಾವಾಸ್ಯೆ |
| 27.11.2023 | ಹುಣ್ಣಿಮೆ, ಉಡುಪಿ ಲಕ್ಷದೀಪ ಸಮಾಪ್ತಿ | 13.12.2023 | ಹೇಮಂತ ಋತು ಮಾರ್ಗಶಿರ ಮಾಸದ ಶುಕ್ಲ ಪಕ್ಷಾರಂಭ |
| 28.11.2023 | ಶರದೃತು ಕಾರ್ತಿಕ ಮಾಸದ ಕೃಷ್ಣ ಪಕ್ಷಾರಂಭ | 14.12.2023 | ಉಡುಪಿ ಚಂದ್ರಮೌಳೀಶ್ವರ ರಥೋತ್ಸವ |
| 30.11.2023 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 8.44ಕ್ಕೆ | 16.12.2023 | ಧನು ಸಂಕ್ರಮಣ |
| | | 18.12.2023 | ಚಂಪಾ ಷಷ್ಠಿ, ಸುಬ್ರಹ್ಮಣ್ಯ ಷಷ್ಠಿ |

## ನಿಧನ



ಕುಮುಟಾದ ದಿ। ಶ್ರೀ ಕಾಗಲ್ ಸುರೇಶ್ ಶ್ಯಾನುಭಾಗ್ ಅವರ ಪತ್ನಿ ಶ್ರೀಮತಿ ಗಿರಿಜಾ ಶ್ಯಾನುಭಾಗ್‌ರವರು 66ನೇ ವಯಸ್ಸಿನಲ್ಲಿ ತಾ.10.10.2023ರಂದು ಮಂಗಳೂರಿನಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರನ್ನು ಅಗಲಿದ್ದಾರೆ.

**** ****



ಕಿಲ್ಲೂರು ಹೆಗ್ಗಡೆಕೋಡಿ ಕೀರ್ತಿಶೇಷ ನಾಗೇಂದ್ರ ರಾವ್‌ರವರ ಪತ್ನಿ ಶ್ರೀಮತಿ ವಿಜಯಲಕ್ಷ್ಮೀಯವರು 70ನೇ ವಯಸ್ಸಿನಲ್ಲಿ ತಾ.20.10.2023ರಂದು ನಿಧನರಾದರು. ಇವರು ಒಬ್ಬ ಪುತ್ರ ಮತ್ತು ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

**** ****



ಶ್ರೀ ತಲಪಾಡಿ ಚಂದ್ರಶೇಖರ ರಾವ್ ಅವರು 73ನೇ ವಯಸ್ಸಿನಲ್ಲಿ ತಾ.22.10.2023 ರಂದು ಮೈಸೂರಿನಲ್ಲಿ ನಿಧನರಾದರು. ಅವರು ಪತ್ನಿ, ಒಬ್ಬ ಪುತ್ರ ಮತ್ತು ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

**** ****



ಶ್ರೀ ಶಿರ್ತಾಡಿ ಕೃಷ್ಣರಾಜ್ ರಾವ್ (ಮುಂಬೈ ನಿವಾಸಿ)ರವರು 75ನೇ ವಯಸ್ಸಿನಲ್ಲಿ ತಾ.23.10.2023 ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ ಮತ್ತು ಒಬ್ಬ ಪುತ್ರನನ್ನು ಅಗಲಿದ್ದಾರೆ.

**** ****




ತೀರ್ಥಹಳ್ಳಿ ಸೊಪ್ಪುಗುಡ್ಡೆಯ ದಿ। ಮಂಜುನಾಥ್ ಶಾನುಭಾಗರ ಪತ್ನಿ ಮಮತಾ (ಲಕ್ಷ್ಮೀ )ಶಾನುಭಾಗರವರು ತಾ.25.10.2023ರಂದು ನಿಧನರಾದರು. ಅವರು ಒಬ್ಬ ಪುತ್ರ ಹಾಗೂ ಒಬ್ಬ ಪುತ್ರಿಯನ್ನು ಅಗಲಿದ್ದಾರೆ.

**** ****



ಪ್ರಗತಿಪರ ಕೃಷಿಕ, ಶ್ರಮಜೀವಿ ಕಬ್ಬಿನಾಲೆ ಗುಬ್ಬಿಮಾರು ಮುತ್ತಯ್ಯ ಹೆಬ್ಬಾರ್‌ರವರು 82ನೇ ವಯಸ್ಸಿನಲ್ಲಿ ಸ್ವಗೃಹದಲ್ಲಿ ನಿಧನರಾದರು. ಅವರು ಪತ್ನಿ, ಒಬ್ಬ ಪುತ್ರ ಮತ್ತು ಐವರು ಪುತ್ರಿಯರನ್ನು ಅಗಲಿದ್ದಾರೆ.

**** ****



ಶ್ರೀ ಇನ್ನ ಕೇದಿಗೆ ಕುಮಾರಸ್ವಾಮಿ ರಾವ್ (ದಿ। ನಿರ್ಮಲಾ ಅವರ ಪತಿ) ಅವರು 84ನೇ ವಯಸ್ಸಿನಲ್ಲಿ ತಾ.07.11.2023 ರಂದು ಮುಂಬೈನಲ್ಲಿ ನಿಧನರಾದರು. ಅವರು ಒಬ್ಬ ಪುತ್ರ ಮತ್ತು ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

**** ****

ಕೊಯಿಲದ ಶಿವರಾಮ (ರಾಜಾ) ರಾವ್ ಅವರು 62ನೇ ವಯಸ್ಸಿನಲ್ಲಿ ತಾ.19.10.2023 ರಂದು ಪುತ್ತೂರಿನ ಆದರ್ಶ ಆಸ್ಪತ್ರೆಯಲ್ಲಿ ನಿಧನರಾದರು. ಅವರು ಪತ್ನಿ ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ.

**** ****

ಶ್ರೀ ಐ.ಕೆ. ಹರಿಶ್ಚಂದ್ರ ರಾವ್ ಅವರು 92ನೇ ವಯಸ್ಸಿನಲ್ಲಿ ತಾ.27.10.2023 ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ ಮತ್ತು ಒಬ್ಬ ಪುತ್ರನನ್ನು ಅಗಲಿದ್ದಾರೆ.

## ಎಲ್ಲೂರು ಭುವನೇಂದ್ರ ರಾವ್ ಅಧ್ಯಕ್ಷರಾಗಿ ಆಯ್ಕೆ



ಎಲ್ಲೂರು ಭುವನೇಂದ್ರ ರಾವ್ ಇವರು ಉಡುಪಿ ಜಿಲ್ಲಾ ನಿವೃತ್ತ ಶಿಕ್ಷಕರ ಸಂಘದ ನೂತನ ಅಧ್ಯಕ್ಷರಾಗಿ ಮುಂದಿನ ಮೂರು ವರ್ಷಗಳ ಅವಧಿಗೆ ಆಯ್ಕೆಯಾದರು. ತಾ.04.11.2023ರಂದು ನಡೆದ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷರಾಗಿ ಪದಗ್ರಹಣ ಮಾಡಿದರು. ಅವರಿಗೆ ಶುಭ ಹಾರೈಕೆಗಳು.

## ಅನೂಪ್ ರಾವ್ ಎಲ್ಲೂರು ಆವಿಷ್ಕಾರಕ್ಕೆ ಪೇಟೆಂಟ್



ಅನೂಪ್ ರಾವ್ ಎಲ್ಲೂರು ಅಮೇರಿಕದ ಪ್ಯಾಟೆಂಟ್ ಕಚೇರಿಯಿಂದ ರೌಟರ್ ಅಂಕಿ ನಕಲಿಸುವ ವಿಧಾನಗಳ ಮೇಲೆ patent ಪಡೆದಿದ್ದಾರೆ. ಇವರ ಆವಿಷ್ಕಾರವು ನಮ್ಮ ಡಿಜಿಟಲ್ ಪ್ರಪಂಚದಲ್ಲಿ ಪ್ರಮುಖ ಉಪಕರಣವಾಗಿರುವ ರೌಟರ್ (router)ನ ದಕ್ಷತೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಲಿದೆ.

ಇವರು ಉಡುಪಿಯ ಶ್ರೀಮತಿ ಜಯಲಕ್ಷ್ಮಿ ಹಾಗೂ ಮುರಳೀಕೃಷ್ಣ ರಾವ್ ಎಲ್ಲೂರು ದಂಪತಿಯ ಪುತ್ರ. ಬೆಂಗಳೂರಿನಲ್ಲಿ ಪತ್ನಿ ಹರ್ಷಿತಾ ಮತ್ತು ಮಗ ವಿವಾಂಶು ಜೊತೆಗೆ ನೆಲೆಸಿರುವ ಇವರು ಇವಾಂತಿ ನೆಟ್ ವರ್ಕ್ಸ್‌ನ ಉದ್ಯೋಗಿ ಹಾಗೂ ಎನ್.ಐ.ಟಿ.ಕೆ. (NITK) ಸುರತ್ಕಲ್‌ನ ಬಿ.ಟೆಕ್ ಪದವೀಧರರು. ಇವರಿಗೆ ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಪರವಾಗಿ ಹೃದಯ ಪೂರ್ವಕ ಅಭಿನಂದನೆಗಳು ಹಾಗೂ ಮುಂದಿನ ದಿನಗಳಲ್ಲಿ ಇನ್ನು ಹೆಚ್ಚು ಸಾಧನೆ ಮಾಡಲಿ ಎಂದು ಶುಭಹಾರೈಸುತ್ತೇವೆ.

## ಸುದೇಷ್ಣಾ ರಾವ್‌ಗೆ ಚಿನ್ನದ ಪದಕ



ನಿಟ್ಟೆ ಎನ್‌ಎಂಎಎಂ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿನಿ ಸುದೇಷ್ಣಾ ರಾವ್ ಬೆಳ್ಮಣ್ ಅವರು ಬಿ.ಇ. ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್ (ಇ.ಎಂಡ್.ಸಿ) ವಿಭಾಗದಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ ಚಿನ್ನದ ಪದಕ ಗೌರವಕ್ಕೆ ಪಾತ್ರರಾಗಿದ್ದಾರೆ. ನಿಟ್ಟೆ ತಾಂತ್ರಿಕ ಮಹಾ ವಿದ್ಯಾಲಯದ ಆವರಣದಲ್ಲಿ ಇತ್ತೀಚೆಗೆ ಜರುಗಿದ ಪದವಿ ಪ್ರಧಾನ ಸಮಾರಂಭದಲ್ಲಿ ನಿಟ್ಟೆ ವಿ.ವಿ. ಕುಲಾಧಿಪತಿ ಎನ್. ವಿನಯ ಹೆಗ್ಡೆ ಅವರಿಂದ ಸ್ವೀಕರಿಸಿದರು. ಈಕೆ ಬೆಳ್ಮಣ್ ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿ ಡಾ। ಬಾಲಕೃಷ್ಣ ರಾವ್ ಮತ್ತು ಸುನೀತಾ ರಾವ್ ದಂಪತಿ ಪುತ್ರಿ.

## ರಕ್ಷಿತಾ ಕೆ.ಎಸ್.



ಕಡೇಮಕ್ಕಿ ಶ್ರೀಮತಿ ಉಮಾ ಮತ್ತು ಸೀತಾರಾಮ ದಂಪತಿಯ ಪುತ್ರಿ ಕುಮಾರಿ ರಕ್ಷಿತಾ ಕೆ.ಎಸ್. ಇವರು ಬಿ.ಎಸ್.ಸಿ. (B.Sc.) ಪದವಿಯಲ್ಲಿ 95% ಅಂಕಗಳಿಸಿ ಉತ್ತೀರ್ಣರಾಗಿರುತ್ತಾರೆ. ಈಕೆ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ವಿದ್ಯಾರ್ಥಿಯಾಗಿದ್ದರು.



ತಾರೀಕು 24.10.2023 ರಂದು ಶ್ರೀ ಶಂಕರ ಮಠ ಕೋಟೆಕಾರ್ ಮಂಗಳೂರು ಇಲ್ಲಿ ಶ್ರೀ ಶಾರದೋತ್ಸವ, ವಿಜಯದಶಮಿ ಆಚರಣೆಯ ಅಂಗವಾಗಿ ಕಾರ್ಕಳ ಸಂಘದ ಅಧ್ಯಕ್ಷರಾದ ಕೇಶವ ರಾವ್ ಇವರು ಸಮಾರೋಪ ಭಾಷಣ ಮಾಡಿದ ಸಂದರ್ಭ ಮತ್ತು ಅವರನ್ನು ಶ್ರೀ ಧರ್ಮದರ್ಶಿ ಶ್ರೀ ಸತ್ಯಶಂಕರ ಬೊಳ್ಳಾವರವರು ಅಭಿನಂದಿಸಿದ ಕ್ಷಣ. ದೇವಿಯ 9 ದಿವಸಗಳ ಅವತಾರ ಹಾಗೂ ಅದರ ಉದ್ದೇಶದ ಭಾಷಣ ನಡೆದಿತ್ತು.

## ಶುಭಾ ಮಂಜುನಾಥ್‌ಗೆ ಡಾಕ್ಟರೇಟ್



'ಟೊಮೋಟೊದ ಇನ್‌ಬ್ರಿಡ್ ತಳಿಗಳಲ್ಲಿ ಇಳುವರಿ ಮತ್ತು ಹಣ್ಣಿನ ಗುಣಮಟ್ಟದ ಗುಣಲಕ್ಷಣಗಳ ವೈವಿಧ್ಯತೆ ಮತ್ತು ಸ್ಥಿರತೆಯ ವಿಶ್ಲೇಷಣೆ' ಎಂಬುದರ ಮೇಲೆ ಮಹಾಪ್ರಬಂಧಕ್ಕೆ ಶುಭಾ ಮಂಜುನಾಥ್ ಅವರು ಡಾಕ್ಟರೇಟ್ ಪಡೆದು ತಾಲೂಕಿಗೆ ಹೆಮ್ಮೆ ತಂದಿದ್ದಾರೆ. ಪಟ್ಟಣದ ಶುಭ ಕ್ಲಿನಿಕ್ ವೈದ್ಯರಾದ ಡಾ। ಸಂತೋಷ್ ಕುಮಾರ್ ಮತ್ತು ಕರಗಡ ವೈದ್ಯಾಧಿಕಾರಿ ಡಾ। ಗೀತಾ ಅವರ ಸುಪುತ್ರಿ ಶುಭಾ ಮಂಜುನಾಥ್ ಅವರು ತೋಟಗಾರಿಕಾ, ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದಿಂದ ಟೊಮೋಟೊದ ಇನ್ ಬ್ರೆಡ್ ತಳಿಗಳಲ್ಲಿ ಇಳುವರಿ ಮತ್ತು ಹಣ್ಣಿನ ಗುಣಮಟ್ಟದ ಗುಣಲಕ್ಷಣಗಳ ವೈವಿಧ್ಯತೆ ಮತ್ತು ಸ್ಥಿರತೆಯ ವಿಶ್ಲೇಷಣೆ ಎಂಬುದರ ಮೇಲೆ ಡಾ। ಹೆಚ್.ಬಿ. ಲಿಂಗಯ್ಯ  ತೋಟಗಾರಿಕಾ ಕಾಲೇಜು, ಬೆಂಗಳೂರು ಇವರ ಮಾರ್ಗದರ್ಶನದಲ್ಲಿ ಬರೆದ ಮಹಾಪ್ರಬಂಧಕ್ಕೆ ಡಾಕ್ಟರೇಟ್ ದೊರಕಿದೆ. ಡಾ। ಶುಭಾ ಅವರು ಬೇಲೂರಿನ ಪೂರ್ಣಪ್ರಜ್ಞಾ ಎಜುಕೇಶನ್ ಸೆಂಟರ್‌ನಲ್ಲಿ ಆರಂಭಿಕ ವಿದ್ಯಾಭ್ಯಾಸ ಮುಗಿಸಿದ್ದರು. ಬೆಳೆಯುವಸಿರಿ ಮೊಳಕೆಯಲ್ಲಿಯೇ ಎಂಬಂತೆ ವಿಜ್ಞಾನಿಯಾಗಬೇಕೆಂಬ ಹಂಬಲದಲ್ಲಿ ನಿರ್ದಿಷ್ಟ ಗುರಿಯನ್ನಿಟ್ಟು ಉತ್ತಮ ಗುರುಗಳ ಮಾರ್ಗದರ್ಶನದಲ್ಲಿ ತಮ್ಮ ಪಿ.ಹೆಚ್.ಡಿ.ಯನ್ನು ಯಶಸ್ವಿಯಾಗಿ ಪಡೆದಿದ್ದಾರೆ. ಪತ್ರಿಕೆಯೊಂದಿಗೆ ಮಾತನಾಡಿದ ಅವರು ತಂದೆ-ತಾಯಿ ಪ್ರೋತ್ಸಾಹ, ಗಂಡನ ಮನೆಯವರ ಸಹಕಾರ, ಉತ್ತಮ ಗುರುಗಳ ಮಾರ್ಗದರ್ಶನದಿಂದ ನನಗೆ ಈ ಸಾಧನೆ ಮಾಡಲು ಸಾಧ್ಯವಾಯಿತು ಎಂದು ನುಡಿದರು. ಇವರ ಈ ಸಾಧನೆಗೆ ರಾಜ್ಯಾದ್ಯಂತ ಅನೇಕ ಗಣ್ಯರು, ಸಂಘ ಸಂಸ್ಥೆಗಳು ಹಾಗೂ ನಮ್ಮ ಸಮಾಜದ ಸಮಾಜ ಬಾಂಧವರು ಇವರನ್ನು ಅಭಿನಂದಿಸಿ ಹೆಚ್ಚಿನ ಶ್ರೇಯಸ್ಸನ್ನು ಹಾರೈಸಿದ್ದಾರೆ.

## ಉಡುಪಿಯ ಶಾರದಾ ಮಂಟಪದಲ್ಲಿ ಕಾವಿ ಕಲೆಯ ಚಿತ್ರ ಪ್ರದರ್ಶನ



ಉಡುಪಿ ಕುಂಜಿಬೆಟ್ಟಿನಲ್ಲಿರುವ ಶ್ರೀ ಶಾರದಾ ಮಂಟಪದ ಕೆ. ಆನಂದ ರಾವ್ ಹಾಲ್ ಗ್ಯಾಲರಿಯಲ್ಲಿ ಡಾ। ಜನಾರ್ದನ್ ರಾವ್ ಹಾವಂಜೆ ಅವರ 'ಸಿಂಧೂರ' ಶೀರ್ಷಿಕೆಯಡಿ ಆಯೋಜಿಸಿದ್ದ ಕಾವಿ ಕಲೆಯಲ್ಲಿ ಚಿತ್ರಿಸಿರುವ ನವದುರ್ಗೆಯರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಕಾರ್ಪೋರೇಷನ್ ಬ್ಯಾಂಕ್‌ನ ನಿವೃತ್ತ ಡಿ.ಜಿ.ಎಂ. ಆದ ಶ್ರೀ ಸಿ.ಎಸ್.ರಾವ್‌ರವರು ಉದ್ಘಾಟಿಸಿ ಮಾತನಾಡುತ್ತಾ ಕಾವಿ ಕಲೆ ಪುರಾತನ ಕಲಾ ಪ್ರಕಾರಗಳಲ್ಲಿ ಒಂದಾಗಿದ್ದು, ಅದರ ರಕ್ಷಣೆಯಲ್ಲಿ ತೊಡಗಿರುವ ಡಾ। ಜನಾರ್ದನ್ ರಾವ್ ಹಾವಂಜೆ ಅವರ ಕಾರ್ಯ ಅನನ್ಯ. ಮುಂದಿನ ಪೀಳಿಗೆಗಾಗಿ ಈ ಕಲೆಯನ್ನು ರಕ್ಷಣೆ ಮಾಡಬೇಕಾದ ಅಗತ್ಯವಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾವಿ ಕಲೆಗೆ ಯಾವುದೇ ಬಣ್ಣ ಬಳಸುವುದಿಲ್ಲ. ಸುಣ್ಣ ಹಾಗೂ ಕೆಂಪು ಮಣ್ಣನ್ನು ಮೆತ್ತಿ ಅದರಲ್ಲಿ ಗೆರೆಯಾಗಿ ಗೀರಿ ಚಿತ್ರಿಸಲಾಗುತ್ತದೆ. ಶಾಸ್ತ್ರಗ್ರಂಥದ ಚಿತ್ರಸೂಕ್ತಿಗಳಲ್ಲಿ ಹಾಗೂ ವಿವಿಧ ಶ್ಲೋಕಗಳಲ್ಲಿ ಉಲ್ಲೇಖಿಸಿರುವಂತೆ ಒಂಭತ್ತು ಚಿತ್ರಗಳನ್ನು ಆರು ತಿಂಗಳಲ್ಲಿ ಬಿಡಿಸಿದ್ದೇನೆ. ಕಲೆಗೆ ಎಂದೂ ಸೋಲಾಗಬಾರದು. ಇದಕ್ಕೆ ಜನರ ಪ್ರೋತ್ಸಾಹ ಅಗತ್ಯ ಎಂದು ಕಲಾವಿದ ಡಾ। ಜನಾರ್ದನ್ ರಾವ್ ಹಾವಂಜೆ ನುಡಿದರು.

ವೇದಿಕೆಯಲ್ಲಿ ಉಡುಪಿಯ ಲೆಕ್ಕ ಪರಿಶೋಧಕರಾದ ಗಣೇಶ್ ಹೆಬ್ಬಾರ್, ಭಾವನಾ ಫೌಂಡೇಶನ್‌ನ ನಿರ್ದೇಶಕ ಹಾವಂಜೆ ಮಂಜುನಾಥ ರಾವ್, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷ ಕೆ. ಮಂಜುನಾಥ ಹೆಬ್ಬಾರ್, ಹಿರಿಯರಾದ ಕೆ.ಪಿ. ರಾವ್, ಯಕ್ಷಗುರು ಹಾವಂಜೆ ಮಂಜುನಾಥಯ್ಯ, ವಿದುಷಿ ಅಕ್ಷತಾ ವಿಶುರಾವ್, ವರ್ಷಾ ಎ.ಜೆ. ಹಾಗೂ ಇತರರು ಉಪಸ್ಥಿತರಿದ್ದರು. ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಕಾರ್ಯದರ್ಶಿ ಪಿ. ಪ್ರಭಾಕರ ಭಂಡಿ ಕಾರ್ಯಕ್ರಮ ನಿರೂಪಿಸಿದರು.



ಇತ್ತೀಚಿಗೆ ನಡೆದ ಮಹಾಮಂಡಲದ ಮಹಾಸಭೆಯಲ್ಲಿ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿಯ ಶ್ರೀ ಶಾರದಾ ಪತ್ರಿಕೆಯನ್ನು ಗೌರವಿಸಲಾಯಿತು. ಶ್ರೀಶಾರದಾ ಪತ್ರಿಕೆಯ ಸಂಪಾದಕರಾದ ಅರವಿಂದ ಕುಮಾರ್‌ರವರು ಗೌರವವನ್ನು ಸ್ವೀಕರಿಸಿದರು.



ಡಾ। ಸನತ್ ರಾವ್, ಡಾ। ಸಾಕೇತ್ ರಾವ್ (ಅಲೆವೂರು ಸುಮಿತ್ರ ಮತ್ತು ಶ್ರೀನಿವಾಸ್ ರಾವ್ ರವರ ಮಕ್ಕಳು) ಶಾರದಾ ಮಂಟಪದ ಹವಾನಿಯಂತ್ರಣ ಸಭಾಂಗಣಕ್ಕೆ ರೂ.50,000/- ದೇಣಿಗೆಯನ್ನು ನೀಡಿರುತ್ತಾರೆ. ಅವರಿಗೆ ಸಂಘದ ಪರವಾಗಿ ಧನ್ಯವಾದಗಳು.



KANASU

Welcome to Kanasu The Resort

Escape to Kanasu for an unforgettable nature retreat.
Enjoy rustic pine cottages, warm hospitality, and local culinary delights.
Reconnect with family amidst nature's beauty.

Key Features & Amenities

- 6 Cottages
- 1 Farm House
- AC Rooms
- Swimming Pool
- Free Wifi
- Free Parking
- Free Breakfast
- Goushala
- Dhaba Style Restaurant
- All Kinds of Events

List of Games and Activities:

- Carom, Chess
- Jenga, Dart
- Fussball
- Mini Golf
- Basketball
- Trampoline
- Cricket
- Mini Football
- Badminton

For More Information

+91 90191 26470 www.kanasuresort.com Kukkehalli, Udupi - 576124

# ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು

## ಹಾವಂಜೆ ಮಂಜುನಾಥ್ ರಾವ್



ಹಾವಂಜೆಯ ಶ್ರೀ ಮಹಾಲಿಂಗೇಶ್ವರ ದೇವಾಲಯದ ಸ್ಥಾನಿಕ ಪರಂಪರೆಯನ್ನು ಹೊಂದಿದ ಕುಟುಂಬದ ಶ್ರೀ ರಾಮ ರಾವ್ ಹಾಗೂ ಸೀತಮ್ಮ ದಂಪತಿಗಳ ಮಗನಾಗಿ, ಓರ್ವ ಪ್ರಯೋಗಶೀಲ ಕೃಷಿಕನಾಗಿ, ಕರಾವಳಿಯ ಗಂಡುಕಲೆ ಯಕ್ಷಗಾನದ ಪ್ರಮುಖ ಮೇಳಗಳಾದ ಮಂದಾರ್ತಿ, ಪೆರ್ಡೂರು, ಗೋಳಿಗರಡಿ ಮೇಳಗಳಲ್ಲಿ ಪ್ರಮುಖ ಕಲಾವಿದನಾಗಿ ಗುರುತಿಸಿಕೊಳ್ಳುತ್ತ, ಬೈಂದೂರಿನಿಂದ ಪಡುಬಿದ್ರಿಯ ತನಕದ ನೂರಾರು ಸಂಘ ಸಂಸ್ಥೆಗಳ ಯಕ್ಷಗಾನ ಗುರುಗಳಾಗಿ, ಪ್ರಸ್ತುತ ಹಾವಂಜೆಯ ಯಕ್ಷಗುರು, ಯಕ್ಷ ರತ್ನವಾಗಿ ಶ್ರೀ ಮಹಾಲಿಂಗೇಶ್ವರ ಯಕ್ಷರಂಗವನ್ನು ಮುನ್ನಡೆಸುತ್ತಿದ್ದಾರೆ. ಶ್ರೀಯುತರು ನಿರಂತರ ಕಲೆಯ ಬಗೆಗಿನ ಕಾರ್ಯಕ್ರಮಗಳನ್ನು ಸಂಘಟಿಸುತ್ತಿರುವ ಹಾವಂಜೆಯ ಭಾವನಾ ಫೌಂಡೇಶನ್ ಹಾಗೂ ಗ್ರಾಮೀಣ ಭಾಗದಲ್ಲಿ ಕಲೆಯ ವಾತಾವರಣವನ್ನು ಬೆಳೆಸುತ್ತಿರುವ ಭಾವನಾ ಕಲಾಶಾಲೆಯ ನಿರ್ದೇಶಕರು. ಸುಮಾರು 55 ವರ್ಷಕ್ಕೂ ಮಿಕ್ಕಿ ಯಕ್ಷಗಾನ ಕ್ಷೇತ್ರದಲ್ಲಿ ಪ್ರಸಂಗಕರ್ತನಾಗಿ, ಭಾಗವತನಾಗಿ, ತಾಳಮದ್ದಳೆ, ಆಕಾಶವಾಣಿ ಕಲಾವಿದನಾಗಿ, ವಾಚನ-ಪ್ರವಚನದ ವಾಗ್ಮಿಯಾಗಿರುವ ಯಕ್ಷಗುರು ಹಾವಂಜೆ ಮಂಜುನಾಥಯ್ಯನವರಿಗೆ ರಾಜ್ಯೋತ್ಸವದ ಶುಭ ಸಂದರ್ಭದಲ್ಲಿ ನೀಡುವ ಪ್ರತಿಷ್ಠಿತ **ಉಡುಪಿ ಜಿಲ್ಲಾ** ಕನ್ನಡ ರಾಜ್ಯೋತ್ಸವ ಪುರಸ್ಕಾರ ದೊರಕಿದುದಕ್ಕೆ ಹಾರ್ದಿಕ ಅಭಿನಂದನೆಗಳು.


## ದೇವಾನಂದ್ ಭಟ್



ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ನಿಕಟ ಪೂರ್ವ ಅಧ್ಯಕ್ಷರು, ಮೂಡಬಿದ್ರೆ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ ಎಂ.ದೇವಾನಂದ ಭಟ್‌ರವರಿಗೆ ಈ ಬಾರಿ **ದಕ್ಷಿಣ ಕನ್ನಡ** ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ದೊರಕಿದೆ.

ಯಕ್ಷಗಾನದಲ್ಲಿ ಬಹಳ ಸಾಧನೆ ಮಾಡಿರುವ ಶ್ರೀಯುತರು ಯಕ್ಷದೇವ ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದ್ದು ಹಲವಾರು ಕಡೆಗಳಲ್ಲಿ ಪ್ರದರ್ಶನ ನೀಡಿರುತ್ತಾರೆ. ಹಿಮ್ಮೇಳ ಕಲಾವಿದರಾದ ಇವರು ಪ್ರಸಿದ್ಧ ಚೆಂಡೆವಾದಕರು. ಹಲವೆಡೆ ತೆಂಕುತಿಟ್ಟು ಯಕ್ಷಗಾನ ತರಬೇತಿ ನಡೆಸಿರುತ್ತಾರೆ. ಬೆಳುವಾಯಿಯವರಾದ ಇವರು ದೇಶ ವಿದೇಶಗಳಲ್ಲಿಯೂ ಯಕ್ಷಗಾನ ಪ್ರದರ್ಶನ ನೀಡಿರುತ್ತಾರೆ. ಪ್ರಶಸ್ತಿ ದೊರೆತ ಅವರಿಗೆ ಹಾರ್ದಿಕ ಅಭಿನಂದನೆಗಳು.

SUMIRASA - Full Villa in Udupi for Stay




Relax with the whole family at this peaceful place to stay with all major attractions at a short distance. Enjoy the sea waves at Malpe beach within 5KM drive. Seak blessing at the famous Srikrishna Temple and Anantheshwara Temple which is just 2KM. Perfect place for hosting wedding guests with major wedding venues and convention halls near by.

WHAT THIS PLACE OFFERS

- GARDEN VIEW
- BATHROOM
  Cleaning products, Bidet, Hot water
- BEDROOM AND LAUNDRY
  Free washing machine
- ESSENTIALS
  Towels, bed sheets, soap, Hangers
- BED LINEN
  Cotton linen
- CLOTHES DRYING RACK
- CLOTHES STORAGE: Wardrobe and drawers
- ENTERTAINMENT
  TV and Books and reading material
- HEATING AND COOLING
  AC – split-type ductless system, Ceiling fan
- INTERNET AND OFFICE
  Wifi
- KITCHEN AND DINING
  Kitchen Space where guests can cook
- REFRIGERATOR
- COOKING BASICS
- DISHES AND SILVERWARE







For Booking Contact : +91 98220 28537
You can also visit https://www.airbnb.co.in/rooms

With Best Compliments From :

BUILDING DREAMS, ENHANCING LIVES.



NAKSHATRA
GANDHINAGAR



SOLITAIRE
HATHILL,



HABITAT
ONE 54
DEREBAIL



ANANTESSH
CAR STREET,

Land Trades®
BUILDERS & DEVELOPERS
BUILDING TRUST, DELIVERING VALUE

MANGALURU'S
LEADING REAL ESTATE COMPANY

RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in

Follow us on :

SHREE SHARADA – Printed and Published by P. Prabhakara Bhandy on behalf of
Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar